# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಶನಿವಾರ, ಜೂನ್ 15, 2024

ಸಂಪುಟ : 51 ಸಂಚಿಕೆ : 32 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







# ಒಂದು ದೇಶ, ಒಂದು ಚುನಾವಣೆ

**ಸಂಪುಟದ ಎದುರು ವರದಿ ಮಂಡನೆ**

ನವದೆಹಲಿ, ಜೂ. 14 – ಒಂದು ದೇಶ, ಒಂದು ಚುನಾವಣೆಗೆ ಸಂಬಂಧಿಸಿದಂತೆ ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ನೇತೃತ್ವದ ಉನ್ನತ ಹಂತದ ಸಮಿತಿ ಸಲ್ಲಿಸಿರುವ ವರದಿಯನ್ನು ಕೇಂದ್ರ ಸಂಪುಟದ ಎದುರು ಮಂಡಿಸಲು ಕೇಂದ್ರ ಕಾನೂನು ಸಚಿವಾಲಯ ಯೋಜಿಸಿದೆ.

ಕಳೆದ ಲೋಕಸಭಾ ಚುನಾವಣೆಗೆ ಮುಂಚೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಉನ್ನತ ಹಂತದ ಸಮಿತಿ ರೂಪಿಸಿದ್ದರು. ನೂತನ ಸರ್ಕಾರದ ಮೊದಲ 100 ದಿನಗಳ ಕಾರ್ಯಸೂಚಿಯಲ್ಲಿ ಒಂದು ದೇಶ, ಒಂದು ಚುನಾವಣೆ ಅಂಶವೂ ಸೇರಿದೆ.

ಮಾಜಿ ರಾಷ್ಟ್ರಪತಿ ಕೋವಿಂದ್ ನೇತೃತ್ವದ ಸಮಿತಿಯು ಕಳೆದ ಮಾರ್ಚ್ 15ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ತನ್ನ ವರದಿ ಸಲ್ಲಿಸಿತ್ತು. ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಏಕ ಕಾಲಕ್ಕೆ ಚುನಾವಣೆ ನಡೆಸಬೇಕು ಎಂದು ಸಮಿತಿ ತನ್ನ ಶಿಫಾರಸ್ಸಿನಲ್ಲಿ ಹೇಳಿತ್ತು.

ಏಕಕಾಲದ ಚುನಾವಣೆಯಿಂದ ಸಂಪನ್ಮೂಲಗಳು ಉಳಿತಾಯವಾಗುತ್ತವೆ, ಅಭಿವೃದ್ಧಿಯ ವೇಗ ಹೆಚ್ಚಾಗುತ್ತದೆ ಹಾಗೂ ಸಾಮಾಜಿಕ ಸಾಮರಸ್ಯ ಹೆಚ್ಚಿಸಲು ನೆರವಾಗುತ್ತದೆ ಎಂದು ವರದಿಯಲ್ಲಿ ತಿಳಿಸಲಾಗಿತ್ತು.

ಏಕಕಾಲಕ್ಕೆ ಚುನಾವಣೆ ನಡೆಸಲು ಸಂವಿಧಾನಕ್ಕೆ 19 ತಿದ್ದುಪಡಿಗಳನ್ನು ತರಬೇಕು. ಇವುಗಳಲ್ಲಿ ಬಹುತೇಕ ತಿದ್ದುಪಡಿಗಳಿಗೆ ರಾಜ್ಯ ವಿಧಾನಸಭೆಗಳ ಅನುಮೋದನೆಯ ಅಗತ್ಯವಿದೆ. ಆದರೆ, ಕೆಲ ತಿದ್ದುಪಡಿಗಳನ್ನು ಸಂಸತ್ತು ಅಂಗೀಕರಿಸಬೇಕಿದೆ.

# ಖಾತರಿಯಡಿ ಜಲಸಂರಕ್ಷಣೆ ಕಾಮಗಾರಿಗೆ ಒತ್ತು



> **ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಬೀಜ, ರಸಗೊಬ್ಬರಕ್ಕೆ ಕೊರತೆಯಾಗಬಾರದು.**
> **- ಗುಂಜನ್ ಕೃಷ್ಣ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ**

ದಾವಣಗೆರೆ, ಜೂ. 14 - ಪ್ರಸಕ್ತ ಸಾಲಿನ ಮುಂಗಾರು ಹಂಗಾಮು ಆರಂಭವಾಗಿದ್ದು, ಬಿತ್ತನೆ ಬೀಜ, ರಸಗೊಬ್ಬರದ ಕೊರತೆಯಾಗದಂತೆ ನೋಡಿಕೊಳ್ಳಬೇಕೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಗುಂಜನ್ ಕೃಷ್ಣ ಸೂಚನೆ ನೀಡಿದರು.

ಇಲ್ಲಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ನಡೆದ ಜಿಲ್ಲಾ ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳೊಂದಿಗಿನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ರೈತರಿಗೆ ಗುಣಮಟ್ಟದ ಬಿತ್ತನೆ ಬೀಜ ಸಿಗಬೇಕು, ಇದರಿಂದ ಉತ್ತಮ ಇಳುವರಿ ಪಡೆಯಲು ಸಾಧ್ಯವಾಗಲಿದೆ. ಪೂರ್ವ ಮುಂಗಾರಿನಲ್ಲಿ ಕಡಿಮೆ ದಿನಗಳಲ್ಲಿ ಬರುವ ತರಕಾರಿ ಬೆಳೆಯಲು ಪ್ರೋತ್ಸಾಹಿಸಿ, ಜೊತೆಗೆ ದ್ವಿದಳ ಧಾನ್ಯ ಬೆಳೆಯಲು ಹೆಚ್ಚಿನ ಒತ್ತನ್ನು ನೀಡಬೇಕೆಂದರು. ಖಾತರಿಯಡಿ ಹೂ, ತರಕಾರಿ ಬೆಳೆಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದ್ದು, ತೋಟಗಾರಿಕೆ ಇಲಾಖೆಯಿಂದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ದೀರ್ಘಕಾಲೀನ ಹಾಗೂ ವಿಶೇಷವಾದ ಹಣ್ಣು, ತರಕಾರಿಗಳ ಬೆಳೆಗೆ ಒತ್ತು ನೀಡಬೇಕೆಂದು ಸೂಚನೆ ನೀಡಿದರು.

**ಸಾವಯವ ತರಕಾರಿ ಬೆಳೆಗೆ ಪ್ರೋತ್ಸಾಹಿಸಿ;** ಜನರು ಆರೋಗ್ಯ ದೃಷ್ಟಿಯಿಂದ ಸಾವಯವ ಕೃಷಿಯಿಂದ ಮಾಡಲಾದ ಹಣ್ಣು, ತರಕಾರಿ, ಸೊಪ್ಪುಗಳನ್ನು ಬಳಸಲು ಇಷ್ಟಪಡುತ್ತಾರೆ. ಅದಕ್ಕಾಗಿ ಸಾವಯವ ಕೃಷಿಯಿಂದ ಬೆಳೆಯುವ ತೋಟಗಾರಿಕೆ, ಕೃಷಿಗೆ ಒತ್ತು ನೀಡಬೇಕು. ಸಾವಯವ ಮೂಲಕ ಬೆಳೆದ ಹಣ್ಣು, ತರಕಾರಿಗಳಿಗೆ ಗುಣಮಟ್ಟದ ದೃಢೀಕರಣದೊಂದಿಗೆ (2ನೇ ಪುಟಕ್ಕೆ)

# ಯಡಿಯೂರಪ್ಪ ಬಂಧಿಸದಂತೆ ಆದೇಶ

**ಪೋಕ್ಸೋ ಪ್ರಕರಣ**



ಬೆಂಗಳೂರು, ಜೂ. 14 - ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಬಂಧಿಸದಂತೆ ರಾಜ್ಯ ಹೈಕೋರ್ಟ್ ಆದೇಶಿಸಿದೆ.

ಯಡಿಯೂರಪ್ಪ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರ ಏಕಸದಸ್ಯ ಪೀಠ ಈ ಆದೇಶ ಮಾಡಿದೆ.

ಜೂನ್ 17 ರಂದು ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಮುಂದೆ ವಿಚಾರಣೆಗೆ ಹಾಜರಾಗಬೇಕು ಎಂದು ನಿರ್ದೇಶನ ನೀಡಿದ್ದಲ್ಲದೆ, ಮುಂದಿನ ಶುಕ್ರವಾರಕ್ಕೆ ವಿಚಾರಣೆಯನ್ನು ಮುಂದೂಡಿದರು. (2ನೇ ಪುಟಕ್ಕೆ)

## ಯಡಿಯೂರಪ್ಪ ಪರ ಎಸ್ಸೆಸ್ ನಿಲುವು



ದಾವಣಗೆರೆ, ಜೂ. 14 – ಪೋಕ್ಸೋ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಂಧನಕ್ಕೆ ಮುಂದಾಗುವುದಕ್ಕೆ ಹಿರಿಯ ಶಾಸಕ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಆಕ್ಷೇಪಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಯಾರೋ ಹೆಣ್ಣು ಮಗಳು ದೂರು ಕೊಟ್ಟ ಮಾತ್ರಕ್ಕೆ ಬಂಧನ ಅಂದರೆ ಹೇಗೆ? ಅದಕ್ಕೆ ಅರ್ಥ ಇದೆಯೇ? ಎಂದು ಪ್ರಶ್ನಿಸಿದರು. (2ನೇ ಪುಟಕ್ಕೆ)

# 2 ಲಕ್ಷ ರೂ. ಕೃಷಿ ಸಾಲ ಮನ್ನಾ

**ಜಾರ್ಖಂಡ್**

ರಾಂಚಿ, ಜೂ. 14 – ರೈತರ 2 ಲಕ್ಷ ರೂ.ಗಳವರೆಗಿನ ಕೃಷಿ ಸಾಲ ಮನ್ನಾ ಮಾಡಲು ಜಾರ್ಖಂಡ್ ಸರ್ಕಾರ ನಿರ್ಧರಿಸಿದೆ. ಇದರಿಂದ 1.91 ಲಕ್ಷ ರೈತರಿಗೆ ನೆರವಾಗಲಿದೆ. ಮಾರ್ಚ್ 31, 2020ರವರೆಗೆ ಪಡೆದಿರುವ ಸಾಲವನ್ನು ಮನ್ನಾ ಮಾಡಲಾಗುವುದು ಎಂದು ರಾಜ್ಯ ಕೃಷಿ (2ನೇ ಪುಟಕ್ಕೆ)

## ಶ್ರೀಮತಿ ಸುರೇಖಾ ಬಸವರಾಜ ಅಂದನೂರು ನಿಧನ



ಶ್ರೀ ಅಂದನೂರು ಕೊಟ್ರಪ್ಪ (ಲಾರಿ ಕೊಟ್ರಪ್ಪ) ಇವರ ಸೊಸೆ, ಮತ್ತು ದಿ: ಅಂದನೂರು ಬಸವರಾಜ್, ಮಾಲಿಕರು, ಅಂದನೂರು ಸೇಲ್ಸ್ ಕಾರ್ಪೊರೇಷನ್, ದಾವಣಗೆರೆ, ಇವರ ಧರ್ಮಪತ್ನಿ,

**ಶ್ರೀಮತಿ ಸುರೇಖಾ ಬಸವರಾಜ ಅಂದನೂರು**

ಇವರು ದಿನಾಂಕ : 14.06.2024ರ ಶುಕ್ರವಾರ ಸಂಜೆ 5.30ಕ್ಕೆ ನಿಧನರಾದರು. ಮೃತರಿಗೆ 65 ವರ್ಷ ವಯಸ್ಸಾಗಿತ್ತು. ಮೃತರ ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ : 15.06.2024ರ ಶನಿವಾರ ಮಧ್ಯಾಹ್ನ 1 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ :
ಮೊ : 99807 79794

## ನೀಟ್ : ಸಿಬಿಐ ತನಿಖೆಗೆ ಕೇಂದ್ರಕ್ಕೆ ನೋಟಿಸ್

ನವದೆಹಲಿ, ಜೂ. 14 – ನೀಟ್ ಪರೀಕ್ಷೆಯಲ್ಲಿ ಅವ್ಯವಹಾರ ನಡೆದಿದ್ದು, ಈ ಬಗ್ಗೆ ಸಿ.ಬಿ.ಐ. ತನಿಖೆ ನಡೆಸಬೇಕು ಎಂಬ ಅರ್ಜಿಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನೋಟಿಸ್ ಕಳಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಹಾಗೂ ಸಂದೀಪ್ ಮೆಹ್ತ ಅವರನ್ನು ಒಳಗೊಂಡ ರಜೆ ಅವಧಿಯ ಪೀಠ ನೋಟಿಸ್ ಕಳಿಸಿದೆ. ಹಿತೇನ್ ಸಿಂಗ್ ಕಶ್ಯಪ್ (2ನೇ ಪುಟಕ್ಕೆ)

## ಸಗಟು ಹಣದುಬ್ಬರ ಶೇ.2.61ಕ್ಕೆ ಏರಿಕೆ

ನವದೆಹಲಿ, ಜೂ. 14 – ಸಗಟು ಹಣದುಬ್ಬರ ಮೇ ತಿಂಗಳಲ್ಲಿ 15 ತಿಂಗಳಲ್ಲೇ ಅತಿ ಹೆಚ್ಚಿನ ಶೇ.2.61ಕ್ಕೆ ತಲುಪಿದೆ. ಬಿಸಿ ಗಾಳಿಯ ಕಾರಣದಿಂದಾಗಿ ತರಕಾರಿ ಮತ್ತಿತರೆ ಆಹಾರ ವಸ್ತುಗಳ ಬೆಲೆ ಏರಿಕೆ ಮತ್ತು ಉತ್ಪಾದನಾ ವಸ್ತುಗಳ ಬೆಲೆ (2ನೇ ಪುಟಕ್ಕೆ)

## ಭದ್ರಾ ಜಲಾಶಯ



ನೀರಿನ ಮಟ್ಟ : 118 ಅಡಿ $8\,^{3}/_{4}$ ಇಂಚು
ಒಳ ಹರಿವು : 1916 ಕ್ಯೂಸೆಕ್ಸ್
ಹೊರ ಹರಿವು : 342 ಕ್ಯೂಸೆಕ್ಸ್
ಕಳೆದ ವರ್ಷ : 137 ಅಡಿ 3 ಇಂಚು


**ಪ್ರೈಮ್ ಸೈಟ್ ಮಾರಾಟಕ್ಕಿದೆ**

ಆಸ್ಪತ್ರೆ, ಮೆಡಿಕಲ್, ಕಾಂಪ್ಲೆಕ್ಸ್ ಮತ್ತು ಅಪಾರ್ಟ್‌ಮೆಂಟ್‌ಗೆ ಅನುಕೂಲವಾಗುವ ಪೂರ್ವ ಮುಖ 3500 ಅಡಿ ಇರುವ ಸೈಟ್ ಮಾರಾಟಕ್ಕಿದೆ. ಸ್ಟೇಡಿಯಂ ರಸ್ತೆ, ಬಾಪೂಜಿ, ಸಿಜಿ ಆಸ್ಪತ್ರೆ ಹತ್ತಿರ, ದಾವಣಗೆರೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
95136 99252









# ದಾವಣಗೆರೆ-ಚಿತ್ರದುರ್ಗ-ತುಮಕೂರು ನೇರ ರೈಲು

## ವೈಜ್ಞಾನಿಕ ಸೇತುವೆ ನಿರ್ಮಿಸಲು ಅಧಿಕಾರಿಗಳಿಗೆ ಶಾಸಕ ಬಸವಂತಪ್ಪ ಸೂಚನೆ



ದಾವಣಗೆರೆ, ಜೂ. 14- ದಾವಣಗೆರೆ-ಚಿತ್ರದುರ್ಗ-ತುಮಕೂರು ನೇರ ರೈಲು ಮಾರ್ಗದ ಕಾಮಗಾರಿ ನಡೆಯುತ್ತಿದ್ದು, ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ಹಾದು ಹೋಗುವ ಮಾರ್ಗದಲ್ಲಿ ವೈಜ್ಞಾನಿಕವಾಗಿ ಸೇತುವೆಗಳನ್ನು ನಿರ್ಮಾಣ ಮಾಡಬೇಕು ಎಂದು ಮಾಯಕೊಂಡ ಕ್ಷೇತ್ರದ ಶಾಸಕ ಕೆ.ಎಸ್. ಬಸವಂತಪ್ಪ ಅವರು ಸಂಬಂಧಪಟ್ಟ ರೈಲ್ವೆ ಅಧಿಕಾರಿಗಳು, ಇಂಜಿನಿಯರ್‌ಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿ ಡಾ.ಎಂ.ವಿ.ವೆಂಕಟೇಶ್, ರೈಲ್ವೆ ಅಧಿಕಾರಿಗಳು, ಇಂಜಿನಿಯರ್‌ಗಳೊಂದಿಗೆ ಚರ್ಚೆ ನಡೆಸಿದ ಅವರು, ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ಈ ಹೊಸ ರೈಲು ಮಾರ್ಗದಲ್ಲಿ ಬುಳ್ಳಾಪುರ, ಆನಗೋಡು, ನೀರ್ಥಡಿ, ಚಿನ್ನಸಮುದ್ರ, ಹೆಬ್ಬಾಳು ಗ್ರಾಮಗಳು ಬರುತ್ತವೆ. ಅಲ್ಲದೇ ಜಿಲ್ಲಾ ಮತ್ತು ರಾಜ್ಯ ಹೆದ್ದಾರಿಗಳು ಇದ್ದು, ಭವಿಷ್ಯದಲ್ಲಿ ಜನಸಂಖ್ಯೆ ಮತ್ತು ವಾಹನ ಸಂಖ್ಯೆಗಳ ಪ್ರಮಾಣ ಹೆಚ್ಚಳದ ದೃಷ್ಟಿಕೋನದಲ್ಲಿ ಮುಂದಿನ 50 ವರ್ಷಗಳ ಕಾಲ ಬಾಳಿಕೆ ಬರುವಂತಹ ವೈಜ್ಞಾನಿಕವಾಗಿ ಕೆಳ ಸೇತುವೆ ಅಥವಾ ಮೇಲ್ಸೇತುವೆ ನಿರ್ಮಿಸಬೇಕೆಂದರು.

ಆನಗೋಡು-ಹೊಸಪೇಟೆ ರಾಜ್ಯ ಹೆದ್ದಾರಿಯಲ್ಲಿ ದೊಡ್ಡ ದೊಡ್ಡ ಲಾರಿಗಳು ಸಂಚರಿಸುವುದರಿಂದ 5 ಮೀಟರ್ ಎತ್ತರದಲ್ಲಿ ಸೇತುವೆ ನಿರ್ಮಿಸಿದರೆ ಸಂಚರಿಸಲು ತೊಂದರೆ ಆಗುತ್ತದೆ. ಹೀಗಾಗಿ 7 ಮೀಟರ್ ಎತ್ತರದಲ್ಲಿ ಸೇತುವೆ ನಿರ್ಮಿಸಬೇಕು. ಅವೈಜ್ಞಾನಿಕವಾಗಿ ಸೇತುವೆ ನಿರ್ಮಿಸಿ ಮತ್ತೆ ಕಿತ್ತು ಕೋಟ್ಯಂತರ ರೂಪಾಯಿ ವ್ಯರ್ಥ ಆಗಬಾರದು. ಇದರಿಂದ ಪ್ರತಿನಿತ್ಯ ಜನರು ಅಧಿಕಾರಿಗಳಿಗೆ ಹಿಡಿಶಾಪ ಹಾಕುವುದಕ್ಕೆ ಅವಕಾಶ ಮಾಡಿಕೊಡಂದರೆ ವೈಜ್ಞಾನಿಕ ಕಾಮಗಾರಿಗೆ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ಸಲಹೆ ನೀಡಿದರು.

ಇತ್ತೀಚೆಗೆ ಅವೈಜ್ಞಾನಿಕ ಸೇತುವೆಗಳನ್ನು ಕಿತ್ತು ಪುನಃ ನಿರ್ಮಿಸಿ, ಕೋಟ್ಯಂತರ ರೂಪಾಯಿ ವ್ಯರ್ಥ ಮಾಡಿದ ಉದಾಹರಣೆಗಳು ನಮ್ಮ ಕಣ್ಣು ಮುಂದಿವೆ. ಒಂದು ಬಾರಿ ಮಾಡಿದ ಕಾಮಗಾರಿಗಳು ಶಾಶ್ವತವಾಗಿ ಉಳಿಯಬೇಕು. ಯಾವುದೇ ಕಾರಣಕ್ಕೂ ಸಾರ್ವಜನಿಕರ ಹಣ ಪೋಲಾಗದಂತೆ ಎಚ್ಚರ ವಹಿಸಬೇಕು. ಕಾಟಾಚಾರಕ್ಕೆ ಕಾಮಗಾರಿ ನಡೆಸದೇ ಗುಣಮಟ್ಟದ ಕಾಮಗಾರಿ ನಡೆಸಬೇಕು. ಈ ಬಗ್ಗೆ ಅಧಿಕಾರಿಗಳು ಗಮನ ಹರಿಸಬೇಕೆಂದು ಸೂಚಿಸಿದರು.

ಈ ಹೊಸ ರೈಲ್ವೆ ಮಾರ್ಗದಲ್ಲಿ ಜಮೀನುಗಳು ಬರಲಿದ್ದು, ಅಲ್ಲಲ್ಲಿ ಸಂಪರ್ಕ ಕಲ್ಪಿಸುವ ರಸ್ತೆಗಳೂ ಇವೆ. ಅಲ್ಲೂ ಕೂಡ ರೈತರು ಜಮೀನುಗಳಿಗೆ ಹೋಗಿ ಬರಲು ಯಾವುದೇ ರೀತಿಯ ತೊಂದರೆ ಆಗದಂತೆ ಸೇತುವೆಗಳನ್ನು ನಿರ್ಮಿಸಬೇಕು. ಈ ಭಾಗಗಳಲ್ಲಿ ಸೇತುವೆ ನಿರ್ಮಿಸಲು ಎಸ್ಟಿಮೇಟ್ ಇರದಿದ್ದರೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ಅಲ್ಲಿ ಸೇತುವೆ ನಿರ್ಮಾಣಕ್ಕೆ ಸೇರ್ಪಡೆ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಭೂಸ್ವಾಧೀನ ಸಮಸ್ಯೆಯಿದ್ದರೆ, ಜಿಲ್ಲಾಧಿಕಾರಿಗಳು ತ್ವರಿತ ಬಗೆಹರಿಸುವ ಕೆಲಸ ಮಾಡಬೇಕೆಂದರು.

ಪಕ್ಕದ ಚಿತ್ರದುರ್ಗ ಜಿಲ್ಲೆಯಲ್ಲಿ ರೈಲ್ವೆ ಮಾರ್ಗದ ಕಾಮಗಾರಿ ಮಂದಗತಿಯಲ್ಲಿ ನಡೆಯು ತ್ತಿದೆ ಎಂಬ ಆರೋಪ ಕೇಳಿ ಬರುತ್ತಿದೆ. ದಾವಣಗೆರೆ ಜಿಲ್ಲೆಯಲ್ಲಿ ಕಾಮಗಾರಿ ತ್ವರಿತವಾಗಿ ಗತಿಯಲ್ಲಿ ನಡೆಯುತ್ತಿರುವಂತೆ, ಅಲ್ಲೂ ಕೂಡ ತ್ವರಿತ ಗತಿಯ ಕಾಮಗಾರಿಗೆ ಸಂಬಂಧಪಟ್ಟ ಅಧಿ ಕಾರಿಗಳೊಂದಿಗೆ ಚರ್ಚಿಸಿ, ಕ್ರಮ ಕೈಗೊಳ್ಳ ಬೇಕೆಂದು ರೈಲ್ವೆ ಅಧಿಕಾರಿಗಳಿಗೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಲೋಕೇಶ್, ಉಪವಿಭಾಗಾಧಿಕಾರಿ ಶ್ರೀಮತಿ ಎನ್. ದುರ್ಗಾಶ್ರೀ, ರೈಲ್ವೆ ಅಧಿಕಾರಿಗಳು ಇದ್ದರು.

# ಖಾತರಿಯಡಿ ಜಲಸಂರಕ್ಷಣೆ ಕಾಮಗಾರಿಗೆ ಒತ್ತು



**(1ನೇ ಪುಟದಿಂದ)** ಪ್ರಮಾಣೀಕರಿಸಿ ಮಾರುಕಟ್ಟೆ ಕಲ್ಪಿಸಿದಲ್ಲಿ ಇದಕ್ಕೆ ಸಾಕಷ್ಟು ಬೇಡಿಕೆ ಇದೆ. ರೈತರಿಗೆ ಇದರಿಂದ ಹೆಚ್ಚಿನ ಆದಾಯ ಬರುವಂತಾಗುತ್ತದೆ ಎಂದು ತೋಟಗಾರಿಕೆ, ಕೃಷಿ ಅಧಿಕಾರಿಗಳಿಗೆ ತಿಳಿಸಿದರು.

**ಜಲಾನಯನ ಕಾಮಗಾರಿಗೆ ಒತ್ತು;** ಖಾತರಿಯಡಿ ಜಲಸಂರಕ್ಷಣೆಗಾಗಿ ರೈತರ ಹೊಲಗಳಲ್ಲಿ ಬದು ನಿರ್ಮಾಣ, ಕೃಷಿ ಹೊಂಡ, ಚೆಕ್ ಡ್ಯಾಂ, ಇಂಗುಗುಂಡಿಗಳನ್ನು ನಿರ್ಮಾಣ ಮಾಡುವ ಮೂಲಕ ಅಂತರ್ಜಲ ಹೆಚ್ಚಳಕ್ಕೆ ಆದ್ಯತೆ ನೀಡಬೇಕು. ಮಳೆಗಾಲದಲ್ಲಿ ಹೆಚ್ಚು ನೀರು ನಿಲ್ಲುವಂತೆ, ಇಂಗುವಂತೆ ನೋಡಿಕೊಂಡಲ್ಲಿ ಬೇಸಿಗೆ ಎದುರಿಸಲು ಸಾಧ್ಯವಾಗಲಿದೆ ಎಂದರು.

ಈ ವೇಳೆ ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಅವರು ಜಿಲ್ಲೆಯಲ್ಲಿ ಉಪಚಾರವಾಗದ 60 ಸಾವಿರ ಹೆಕ್ಟೇರ್ ಭೂಮಿ ಇದ್ದು ಈಗಾಗಲೇ 1.80 ಲಕ್ಷ ಹೆಕ್ಟೇರ್ ಉಪಚಾರವಾದ ಜಲಾನಯನ ಪ್ರದೇಶ ಜಿಲ್ಲೆಯಲ್ಲಿದೆ. ಖಾತರಿಯಡಿ ಇಂತಹ ಪ್ರದೇಶದಲ್ಲಿ ಈ ವರ್ಷ ಜಲಸಂರಕ್ಷಣಾ ಕಾಮಗಾರಿಗಳನ್ನು ತೆಗೆದುಕೊಳ್ಳಲು ಸೂಚನೆ ನೀಡಿದರು.

**ಮಳೆ ನೀರು ಕೊಯ್ಲು ;** ಜಿಲ್ಲೆಯ ನಗರ, ಪಟ್ಟಣ ಪ್ರದೇಶದಲ್ಲಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಹೊಸ ಮನೆಗಳ ನಿರ್ಮಾಣಕ್ಕೆ ನೀಡುವ ಪರವಾನಗಿ ವೇಳೆ ಕಡ್ಡಾಯವಾಗಿ ಮಳೆ ನೀರು ಕೊಯ್ಲು ಮಾಡಿಕೊಳ್ಳುವ ಷರತ್ತಿನೊಂದಿಗೆ ಅನುಮತಿ ನೀಡಬೇಕು. ಏಕೆಂದರೆ ಬೇಸಿಗೆಯಲ್ಲಿ ಈ ವರ್ಷ ನೀರಿನ ಸಮಸ್ಯೆ ಎದುರಿಸುವಂತಾಯಿತು. ಮಳೆ ನೀರು ಕೊಯ್ಲು ಮಾಡುವುದರಿಂದ ಬೇಸಿಗೆಯಲ್ಲಿ ಇದರ ಉಪಯೋಗವಾಗುವುದರಿಂದ ನೀರಿನ ಸಂಗ್ರಹವಾಗಿ ಜನರಿಗೆ ಉಪಯೋಗವಾಗಲಿದೆ ಎಂದರು.

**ಕುಡಿಯುವ ನೀರು ಪರೀಕ್ಷೆ ಮಾಡಲು ಸೂಚನೆ;** ಕಲುಷಿತ ಕುಡಿಯುವ ನೀರಿನ ಪೂರೈಕೆಯಿಂದ ಸಾಮೂಹಿಕವಾಗಿ ಅನಾರೋಗ್ಯದ ವರದಿಯು ರಾಜ್ಯದಲ್ಲಿ ಅಲ್ಲಲ್ಲಿ ಕಂಡು ಬಂದಿದ್ದು ಕುಡಿಯುವ ನೀರು ಪೂರೈಕೆ ಮಾಡುವ ಮೊದಲು ಕಡ್ಡಾಯವಾಗಿ ಪರೀಕ್ಷೆ ನಡೆಸಬೇಕು. ನೀರಿನ ಮೂಲ, ಪೈಪ್‌ಲೈನ್, ಟ್ಯಾಂಕ್‌ಗಳಲ್ಲಿ ನೀರನ್ನು ಕಾಲ ಕಾಲಕ್ಕೆ ಪರೀಕ್ಷೆ ಮಾಡಿದ ನಂತರವೇ ಪೂರೈಕೆ ಮಾಡಬೇಕು. ನಗರ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಆಯಾ ಸಂಸ್ಥೆಗಳ ಮುಖ್ಯಸ್ಥರ ಜವಾಬ್ದಾರಿಯಾಗಿರುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಿರಿಯ ಇಂಜಿನಿಯರ್‌ಗಳು ನೀರಿನ ಪರೀಕ್ಷೆ ನಡೆಸಿ ಪೂರೈಕೆ ಮಾಡಬೇಕು. ನೀರಿನ ಪೂರೈಕೆಯಲ್ಲಿ ಕಲುಷಿತ ನೀರು ಪೂರೈಕೆಯಾದಲ್ಲಿ ಸ್ಥಳೀಯ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂದ ಅವರು ಕುಡಿಯುವ ನೀರಿನ ಪೈಪ್‌ಲೈನ್ ಚರಂಡಿ ದಾಟಿ ಹೋಗುವಂತಿದ್ದಲ್ಲಿ ಪರಿಶೀಲನೆ ಮಾಡಿ ಬೇರೆಡೆ ಸ್ಥಳಾಂತರಿಸಿ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಬೇಕು, ಯಾವುದೇ ಕಾರಣಕ್ಕೂ ಚರಂಡಿಯೊಂದಿಗೆ ಕುಡಿಯುವ ನೀರಿನ ಪೈಪ್‌ಲೈನ್ ಇರಬಾರದು ಎಂದು ತಿಳಿಸಿದರು.

**ಶುದ್ಧ ಕುಡಿಯುವ ನೀರು ಒದಗಿಸಿ;** ಜಿಲ್ಲೆಯಲ್ಲಿ 799 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿದ್ದು, ಇವುಗಳಲ್ಲಿ 761 ಕಾರ್ಯ ನಿರ್ವಹಿಸುತ್ತಿವೆ. 34 ಘಟಕಗಳಿಗೆ ನೀರಿನ ಪೂರೈಕೆ ಇಲ್ಲದ ಕಾರಣ ಮತ್ತು 4 ಇತರೆ ಕಾರಣಗಳಿಂದ ಕಾರ್ಯ ನಿರ್ವಹಿಸುತ್ತಿಲ್ಲ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್ ತಿಳಿಸಿದಾಗ ಎಲ್ಲೆಲ್ಲಿ ಕುಡಿಯುವ ನೀರು ಯೋಗ್ಯವಲ್ಲ ಎಂದು ಪರೀಕ್ಷಾ ವರದಿಯಿಂದ ದೃಢಪಟ್ಟಿದೆಯೋ ಅಲ್ಲಿನ ಜನರು ಶುದ್ಧ ಕುಡಿಯುವ ನೀರಿನ ಘಟಕದಿಂದ ಪಡೆದ ನೀರನ್ನೇ ಕುಡಿಯಲು ಜಾಗೃತಿ ಮೂಡಿಸಬೇಕೆಂದು ಉಸ್ತುವಾರಿ ಕಾರ್ಯದರ್ಶಿ ತಿಳಿಸಿದರು.

**ಸಮಸ್ಯಾತ್ಮಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಕಾಮಗಾರಿ;** ಕಳೆದ ಬೇಸಿಗೆ ಸಂದರ್ಭದಲ್ಲಿ ಅಲ್ಲಿನ ಕೊಳವೆ ಬಾವಿಗಳು ವಿಫಲವಾಗಿ ಖಾಸಗಿ ಕೊಳವೆ ಬಾವಿಗಳ ಮೂಲಕ ನೀರು ಪೂರೈಕೆ ಮಾಡಿದ ಮತ್ತು ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ ಮಾಡಿದ ಗ್ರಾಮಗಳಲ್ಲಿ ಆದ್ಯತೆಯೊಂದಿಗೆ ಹೊಸ ಕುಡಿಯುವ ನೀರಿನ ಪೂರೈಕೆ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿಯವರು ತಿಳಿಸಿದರು.

**ಖಾತರಿಯಲ್ಲಿ 35 ಲಕ್ಷ ಮಾನವ ದಿನಗಳ ಗುರಿ;** ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿಯಡಿ ಪ್ರಸಕ್ತ ವರ್ಷ 215.80 ಕೋಟಿ ಕಾರ್ಮಿಕ ಆಯವ್ಯಯ ಅಂದಾಜಿಸಲಾಗಿದ್ದು, 35 ಲಕ್ಷ ಮಾನವ ದಿನಗಳ ಸೃಜನೆಯ ಗುರಿ ಹೊಂದಲಾಗಿದೆ. ಇಲ್ಲಿಯವರೆಗೆ 6.13 ಲಕ್ಷ ಮಾನವ ದಿನಗಳ ಸೃಜನೆ ಮಾಡಿ ರೂ.20.11 ಕೋಟಿ ಕೂಲಿ ಬಾಬ್ತು, ರೂ. 10.35 ಕೋಟಿ ಸಾಮಗ್ರಿ ಬಾಬ್ತು ಖರ್ಚು ಮಾಡಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಹರಿಹರದಲ್ಲಿ ರಕ್ಷಣಾ ವೇದಿಕೆ ಪ್ರತಿಭಟನೆ

## ನಟ ದರ್ಶನ್ ಪೋಸ್ಟರ್‌ಗೆ ಬೆಂಕಿ



ಹರಿಹರ, ಜೂ.14- ಚಿತ್ರದುರ್ಗದ ರೇಣುಕಾ ಸ್ವಾಮಿ ಹತ್ಯೆಯನ್ನು ಖಂಡಿಸಿ, ನಗರದ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಕಾರ್ಯಕರ್ತರು ನಟ ದರ್ಶನ್ ಪೋಸ್ಟರ್‌ಗಳಿಗೆ ಬೆಂಕಿ ಹಚ್ಚಿ ಪ್ರತಿಭಟನೆ ನಡೆಸಿದರು.

ರಾಣಿ ಚೆನ್ನಮ್ಮ ವೃತ್ತದಿಂದ ಆರಂಭಗೊಂಡ ಕಾರ್ಯಕರ್ತರ ಪ್ರತಿಭಟನಾ ಮೆರವಣಿಗೆಯು ಮುಖ್ಯರಸ್ತೆ, ಗಾಂಧಿ ವೃತ್ತದ ಮೂಲಕ ತಹಶೀಲ್ದಾರ್ ಕಚೇರಿಗೆ ತೆರಳಿ ಶಶಿಧರಯ್ಯನವರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ರಕ್ಷಣಾ ವೇದಿಕೆಯ ರಮೇಶ್ ಮಾನೆ, ಪ್ರೀತಂ ಬಾಬು ಮಾತನಾಡಿ, ಚಲನಚಿತ್ರ ನಟ ದರ್ಶನ್ ಸೇರಿದಂತೆ ಅವರ ಸ್ನೇಹಿತರು ರೇಣುಕಾ ಸ್ವಾಮಿಯವರನ್ನು ಕೊಲೆ ಮಾಡಿರುವುದು ಘೋರ ಅಪರಾಧವಾಗಿದೆ. ದರ್ಶನ್ ಸೇರಿದಂತೆ, ಕೃತ್ಯದಲ್ಲಿ ಭಾಗಿಯಾದ ಎಲ್ಲರನ್ನೂ ಗಲ್ಲಿಗೇರಿಸಬೇಕು. ರೇಣುಕಾಸ್ವಾಮಿ ಪತ್ನಿ ಸಹನಾ ಅವರು ಹರಿಹರ ನಗರದವರಾಗಿದ್ದು, ಅವರಿಗೆ ಸರಿಯಾದ ನ್ಯಾಯವನ್ನು ಕೊಡಿಸಲು ಸರ್ಕಾರ ಮುಂದಾಗಬೇಕು ಮತ್ತು ಒಂದು ಕೋಟಿ ರೂಪಾಯಿ ಜೀವನಾಂಶವನ್ನು ಅವರಿಗೆ ನೀಡಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಿದ್ದಪ್ಪ, ಸಮಾಳ ಚಂದ್ರಪ್ಪ, ಒಳಗಡ್ಡಿ ಚನ್ನಬಸಪ್ಪ, ಬಸವರಾಜಯ್ಯ, ರಮೇಶ್, ಅಲಿ ಅಕ್ಬರ್, ಜಗದೀಶ್, ರವಿಕುಮಾರ್, ಸುರೇಶ್ ಸ್ವಾಮಿ, ಹೆಚ್.ಎಂ. ವೀರಭದ್ರಯ್ಯ ಹಾಗೂ ಇತರರು ಹಾಜರಿದ್ದರು.

# ಯಡಿಯೂರಪ್ಪ ಪರ ಎಸ್ಪೆಸ್ ನಿಲುವು

**(1ನೇ ಪುಟದಿಂದ)** ಯಾರೋ ದಾರಿಯಲ್ಲಿ ಹೋಗೋರು ದೂರು ಕೊಟ್ಟರೆ ಬಂಧನ ಎಂದರೆ ಏನರ್ಥ. ಮಹಿಳೆ 55 ಜನರ ವಿರುದ್ಧವೂ ದೂರು ನೀಡಿದ್ದಾರೆ. ಇಂತಹದಕ್ಕೆ ಬೆಲೆ ಇದೆಯೇ? ಎಂದವರು ಕೇಳಿದ್ದಾರೆ.

ನಟ ದರ್ಶನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಶಿವಶಂಕರಪ್ಪ, ದರ್ಶನ್ ಮಾಡಿದ್ದು ತಪ್ಪು. ಯಾರೂ ಕಾನೂನನ್ನು ಕೈಗೆ ತೆಗೆದುಕೊಳ್ಳಬಾರದು ಎಂದರು.

ದರ್ಶನ್ ಮೇಲೆ ಕ್ರಮ ಕೈಗೊಳ್ಳುವಂತೆ ಅಖಿಲ ಭಾರತ ವೀರಶೈವ ಮಹಾಸಭಾದಿಂದ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ ಎಂದೂ ಅವರು ಹೇಳಿದರು.

# ಯಡಿಯೂರಪ್ಪ ಬಂಧಿಸದಂತೆ ಆದೇಶ

**(1ನೇ ಪುಟದಿಂದ)** ಯಡಿಯೂರಪ್ಪ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ವಾದ ಮಂಡಿಸಿ, ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡು ಅರ್ಜಿಗಳಿದ್ದು ಒಂದು ಪ್ರಕರಣವನ್ನು ರದ್ದುಗೊಳಿಸುವಂತೆ ಇನ್ನೊಂದು ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿದ್ದರು.

ಪ್ರಕರಣದ ದೂರುದಾರರಿಗೆ ಬ್ಲ್ಯಾಕ್‌ಮೇಲ್ ಮಾಡುವುದೇ ಕಸುಬು. ಇವರು ಸಾಕಷ್ಟು ಪ್ರಭಾವಿಗಳ ವಿರುದ್ಧವೂ ದೂರು ದಾಖಲಿಸಿದ್ದಾರೆ. ಇಲ್ಲಿ ಭಾವನಾತ್ಮಕ ಅಂಶಗಳಿಗಿಂತ ವಾಸ್ತವಾಂಶಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ವಾದ ಮಂಡಿಸಿದರು.

ಎಫ್‌ಐಆರ್ ಯಾರು ದಾಖಲಿಸಿದ್ದಾರೆ? ಎಂದು ನ್ಯಾಯಾಧೀಶರು ಪ್ರಶ್ನಿಸಿದರು.

ಆಗ ಯಡಿಯೂರಪ್ಪ ವಕೀಲರು, ಸಂತ್ರಸ್ತೆಯ ತಾಯಿ. ಅವರು ಉದ್ಯಮಿ ಎಂದರು. ಆಗ ನ್ಯಾಯಾಧೀಶರು, ಮಹಿಳಾ ಉದ್ಯಮಿ ಎಂದು ನ್ಯಾಯಾಲಯ ಪರಿಗಣಿಸುತ್ತದೆ ಎಂದರು.

ಸಿಐಡಿ ನೋಟಿಸ್ ಬಳಿಕ ಯಡಿಯೂರಪ್ಪ ವಿಚಾರಣೆಗೆ ಹಾಜರಾಗಿದ್ದಾರೆ. ಧ್ವನಿ ಪರೀಕ್ಷೆಗೂ ಸಹಕಾರ ನೀಡಿದ್ದಾರೆ, ಹಾಗಾಗಿ ಅವರನ್ನು ಬಂಧಿಸುವ ಅವಶ್ಯಕತೆ ಇಲ್ಲ ಎಂದರು.

ಇದಕ್ಕೆ ಪ್ರತಿ ವಾದ ಮಂಡಿಸಿದ ಅಡ್ವೋಕೇಟ್ ಜನರಲ್ ಶಶಿಕಿರಣ ಶೆಟ್ಟಿ, ದೂರುದಾರೆ ಮೃತಪಟ್ಟಿದ್ದಾರೆ. ಆರೋಪಿಯು ವಿಚಾರಣೆಗೆ ಹಾಜರಾಗದೇ ಜೂನ್ 11ರಂದು ದೆಹಲಿಗೆ ತೆರಳಿದ್ದಾರೆ. ಹೀಗಾಗಿ ತನಿಖಾಧಿಕಾರಿಗಳು ನ್ಯಾಯಾಲಯದಿಂದ ಅರೆಸ್ಟ್ ವಾರೆಂಟ್ ಪಡೆದಿದ್ದಾರೆ ಎಂದರು.

ಅಷ್ಟೇ ಅಲ್ಲ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಬಂದಿದೆ. ವರದಿ ಬಂದ ನಂತರವೇ ಆರೋಪಿಗೆ ನೋಟಿಸ್ ನೀಡಿರುವುದಾಗಿ ನ್ಯಾಯಾಲಯದ ಗಮನಕ್ಕೆ ತಂದರು.

# ಹೊನ್ನಾಳಿ ಡಿಪೋದಿಂದ 2 ಕೆಎಸ್‌ಆರ್‌ಟಿಸಿ ಬಸ್ಸು ಬಿಡುಗಡೆ



ಹೊನ್ನಾಳಿ, ಜೂ.14- ಹೊನ್ನಾಳಿ - ನ್ಯಾಮತಿ ಅವಳಿ ತಾಲ್ಲೂಕಿನ ಪ್ರಯಾಣಿಕರ ಅನುಕೂಲಕ್ಕಾಗಿ ಇಂದು ಎರಡು ಸರ್ಕಾರಿ ಬಸ್ಸುಗಳನ್ನು ಬಿಡುಗಡೆ ಮಾಡಲಾಗುತ್ತಿದೆ ಎಂದು ಶಾಸಕ ಶಾಂತನಗೌಡರು ಹೇಳಿದರು.

ಶಾಸಕರು ಹೊನ್ನಾಳಿ ಕೆಎಸ್‌ಆರ್‌ಟಿಸಿ ಡಿಪೋದಲ್ಲಿ ಬೆಳಗ್ಗೆ 8 ಗಂಟೆಗೆ ಚಾಲನೆ ಮಾಡುವ ಮೂಲಕ ನೂತನ ಬಸ್‌ಗಳಿಗೆ ಚಾಲನೆ ನೀಡಿದರು.

ಹೊನ್ನಾಳಿ - ಕುಷ್ಟಗಿ - ಹೊಸಪೇಟೆ ಮಾರ್ಗವಾಗಿ ವಿಜಯಪುರಕ್ಕೆ ಮತ್ತು ಹೊನ್ನಾಳಿ - ನ್ಯಾಮತಿ - ಸವಳಂಗ ಮಾರ್ಗವಾಗಿ ಶಿವಮೊಗ್ಗಕ್ಕೆ ಇಂದು ಪ್ರತ್ಯೇಕ ಬಸ್‌ಗಳ ಚಾಲನೆ ನೀಡಿದ ಶಾಸಕರು, ಅಗತ್ಯ ಹಾಗೂ ಪ್ರಯಾಣಿಕರ ಬೇಡಿಕೆಗಳಿಗೆ ಅನುಗುಣವಾಗಿ ಮುಂದಿನ ದಿನಗಳಲ್ಲಿ ಆದ್ಯತೆ ಮೇರೆಗೆ ಬಸ್ಸುಗಳನ್ನು ಬಿಡಲಾಗುವುದೆಂದರು.

ಡಿಪೋ ಮ್ಯಾನೇಜರ್ ಕೆ.ಮಹೇಶ್ವರಪ್ಪ, ಸಿಬ್ಬಂದಿಗಳಾದ ರಾಜು ಹಾರೊ ಬಿಡಿ, ಜಗದೀಶ್, ಕೆ.ಎಂ.ಪಿ.ಎಲ್ ಮಾಸ್ಟರ್, ಚಾಲಕರು, ನಿರ್ವಾಹಕರು, ಪ್ರಯಾಣಿಕರು ಇದ್ದರು.

ಹೊನ್ನಾಳಿಯಿಂದ ಪ್ರತಿ ದಿನ ನ್ಯಾಮತಿಗೆ ಕಾರ್ಯ ನಿಮಿತ್ತ ಪೋಸ್ಟ್ ಮಾಸ್ಟರ್ ವೀರೇಂದ್ರ ಸ್ವಾಮಿ ತೆರಳುವವರಾಗಿದ್ದು, ಇಂದು ಅವರು ನ್ಯಾಮತಿಗೆ ಮೊದಲ ಟಿಕೆಟ್ ಪಡೆದರು. 25ಕ್ಕೂ ಹೆಚ್ಚು ಪ್ರಯಾಣಿಕರು ಹೊನ್ನಾಳಿಯಿಂದ ನ್ಯಾಮತಿ, ಸವಳಂಗ ಮಾರ್ಗವಾಗಿ ಶಿವಮೊಗ್ಗಕ್ಕೆ ಪ್ರಯಾಣ ಬೆಳೆಸಿದರು.

# ಕೇಂದ್ರ ಸಚಿವ ಸೋಮಣ್ಣ ಪುತ್ರನ ವಿರುದ್ಧ ವಂಚನೆ ದೂರು

ಬೆಂಗಳೂರು, ಜೂ. 14 – ಕೇಂದ್ರ ಸಚಿವ ವಿ. ಸೋಮಣ್ಣ ಅವರ ಪುತ್ರ ಸೇರಿದಂತೆ ಮೂವರ ವಿರುದ್ಧ ವಂಚನೆಯ ದೂರು ದಾಖಲಿಸಲಾಗಿದೆ.

ಸಚಿವರ ಪುತ್ರ ಬಿ.ಎಸ್. ಅರುಣ್ ಭಾಗಿಯಾಗಿರುವ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಯಲ್ಲಿ ಅವ್ಯವಹಾರ ನಡೆಸಲಾಗಿದೆ ಹಾಗೂ ಉದ್ಯಮಕ್ಕೆ ಸಂಬಂಧಿಸಿದ ದಂಪತಿಗೆ ಬೆದರಿಕೆ ಹಾಕಲಾಗಿದೆ ಎಂದು ಎಫ್.ಐ.ಆರ್. ದಾಖಲಿಸಲಾಗಿದೆ.

ತೃಪ್ತಿ ಎಂಬುವವರು ದೂರು ದಾಖಲಿಸಿದ್ದಾರೆ. ಅರುಣ್ ಹಾಗೂ ನಾನು ಮತ್ತು ನನ್ನ ಪತಿ ಮಧ್ವರಾಜ್ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿ ನಡೆಸುತ್ತಿದ್ದೆವು. ಈ ಕಂಪನಿಗೆ ನಷ್ಟವಾಗಿರುವ ಬಗ್ಗೆ ಅರುಣ್ ಮಾಹಿತಿ ಮುಚ್ಚಿಟ್ಟಿದ್ದರು. ಈ ಬಗ್ಗೆ ಕೇಳಿದಾಗ ನನ್ನನ್ನು ಹಾಗೂ ಪತಿಯನ್ನು ಕಂಪನಿಯಿಂದ ಹೊರ ಹಾಕಲಾಗಿದೆ ಎಂದು ದೂರಿನಲ್ಲಿ ಹೇಳಲಾಗಿದೆ.

ನಮಗೆ ಬರಬೇಕಾದ ಡಿವಿಡೆಂಡ್ ಕಡಿಮೆ ಮಾಡಲಾಗಿದೆ. ಕಂಪನಿಯಲ್ಲಿ ಅವ್ಯವಹಾರಗಳಾಗಿವೆ. ನನ್ನ ಕುಟುಂಬದವರಿಗೆ ಗೂಂಡಾಗಳಿಂದ ಬೆದರಿಕೆ ಹಾಕಲಾಗುತ್ತಿದೆ. ಗಂಡನನ್ನು ಕೋಣೆಯಲ್ಲಿ ಕಟ್ಟಿ ಹಾಕಿ ಹಿಂಸೆ ನೀಡಲಾಗಿದೆ ಎಂದೂ ಅವರು ದೂರಿನಲ್ಲಿ ಹೇಳಿದ್ದಾರೆ. ಇಲ್ಲಿನ ಸಂಜಯ್ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

# 2 ಲಕ್ಷ ರೂ. ಕೃಷಿ ಸಾಲ ಮನ್ನಾ

**(1ನೇ ಪುಟದಿಂದ)** ಸಚಿವ ಬಾದಲ್ ಪತ್ರಲೇಖ್ ತಿಳಿಸಿದ್ದಾರೆ.ಈ ಹಿಂದೆ ಸರ್ಕಾರ 50 ಸಾವಿರ ರೂ.ಗಳವರೆಗಿನ ಸಾಲ ಮನ್ನಾ ಮಾಡಿತ್ತು. ಈಗ 50 ಸಾವಿರದಿಂದ 2 ಲಕ್ಷ ರೂ.ಗಳವರೆಗಿನ ಸಾಲ ಮನ್ನಾ ಮಾಡಿದೆ.


॥ ಶ್ರೀ ಅಲ್ಲಮಪ್ರಭು ಪ್ರಸನ್ನ ॥

**ಗುರುಲಿಂಗ ಜಂಗಮಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ಸಿಟಿ ಸಿದ್ದಲಿಂಗಸ್ವಾಮಿ ಕಾಂಪೌಂಡ್ ಶಿವಪ್ಪಯ್ಯ ಸರ್ಕಲ್ ಹತ್ತಿರ ವಾಸಿ
ಶ್ರೀಮತಿ ಸುಶೀಲಮ್ಮ ಶ್ರೀ ಸಿದ್ದಲಿಂಗ ಸ್ವಾಮಿ ಇವರ ಪುತ್ರ, ಶ್ರೀಮತಿ ಅನುಸೂಯಮ್ಮ ಶ್ರೀ ಶಿವಯೋಗಿ ಸ್ವಾಮಿ ಎ.ಹೆಚ್. ಇವರ ಸೊಸೆ, ಶ್ರೀಮತಿ ಎ.ಹೆಚ್. ಶೋಭ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.



ದಿನಾಂಕ : 07.06.2024ನೇ ಶುಕ್ರವಾರ ಸಂಜೆ 5.09ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀಯುತ ಚಂದ್ರಶೇಖರ್ ಎ.ಹೆಚ್.**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಗುರುಲಿಂಗ ಜಂಗಮಾರಾಧನೆಯನ್ನು** ದಿನಾಂಕ 15.06.2024ನೇ ಶನಿವಾರ ಬೆಳಿಗ್ಗೆ 11.30ಕ್ಕೆ ಮೃತರ ಸ್ವಗೃಹ ಸಿದ್ದಲಿಂಗಸ್ವಾಮಿ ಕಾಂಪೌಂಡ್ ಶಿವಪ್ಪಯ್ಯ ಸರ್ಕಲ್ ಹತ್ತಿರ, ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು : ಶ್ರೀಮತಿ ಎ.ಹೆಚ್. ಶೋಭ ಮತ್ತು ಮಕ್ಕಳು, ಶ್ರೀಮತಿ ಟಿ.ಎಂ. ವೀಣಾ ಮತ್ತು ಮಕ್ಕಳು, ಅಥಣಿ ಹಿರೇಮಠ ವಂಶಸ್ಥರು ಹಾಗೂ ಬಂಧು-ಮಿತ್ರರು.
**ಮೊ : 81054 82818, 98800 26074**

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿವಿನಂತಿ.



**4ನೇ ವರ್ಷದ ಪುಣ್ಯಸ್ಮರಣೆ**

**ದಿ॥ ಶ್ರೀಮತಿ ದುಗ್ಗಮ್ಮನವರು**
ನಿಧನ : 15-06-2020



ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು. ಸದಾ ನಿಮ್ಮಸ್ಮರಣೆ ಹಾಗೂ ನೆನಪಿನಲ್ಲಿರುವ

ಪತಿ : ಗುಡದಪ್ಪ ಶ್ಯಾಗಲೆ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ಶ್ರೀಮತಿ ದುಗ್ಗಮ್ಮ ಒಣಮೆಣಸಿನಕಾಯಿ ವ್ಯಾಪಾರಿಗಳು
ಕೆ.ಆರ್. ಮಾರ್ಕೆಟ್, ದಾವಣಗೆರೆ. ಮೊ. : 95357 60078


# ಮೋದಿ ಜಯ: 12 ಕಿ.ಮೀ ದೀಡು ನಮಸ್ಕಾರ ಹಾಕಿದ ಮಲ್ಲೇಶಪ್ಪ



ಹರಪನಹಳ್ಳಿ, ಜೂ.14- ನರೇಂದ್ರ ಮೋದಿ ಅವರು ಲೋಕಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿ, ಮೂರನೇ ಬಾರಿಗೆ ಪ್ರಧಾನ ಮಂತ್ರಿಯಾಗಲಿ ಎಂದು ಹರಕೆ ಹೊತ್ತಿದ್ದ ತಾಲ್ಲೂಕಿನ ಹಿರೇಮೇಗಳಗೆರೆ ಗ್ರಾಮದ ಅಭಿಮಾನಿಯೊಬ್ಬ ಶುಕ್ರವಾರ ಉಚ್ಚಂಗಿದುರ್ಗದ ಉಚ್ಚಂಗೆಮ್ಮ ದೇವಸ್ಥಾನದವರೆಗೆ 12 ಕಿ.ಮೀ ದೀಡು ನಮಸ್ಕಾರ ಹಾಕಿ ಹರಕೆ ತೀರಿಸಿದರು.

ಹಿರೇಮೇಗಳಗೆರೆ ಗ್ರಾಮದ ಜಿ.ಡಿ ಮಲ್ಲೇಶಪ್ಪ ಅವರು ಸ್ವಗ್ರಾಮದಿಂದ ಬೇವಿನಹಳ್ಳಿ ತಾಂಡಾ, ಯು.ಬೇವಿನಹಳ್ಳಿ ಗ್ರಾಮದ ಮೂಲಕ ಉಚ್ಚಂಗಿದುರ್ಗದ ಉಚ್ಚಂಗೆಮ್ಮ ಪಾದಗಟ್ಟೆ ದೇವಸ್ಥಾನದ ವರೆಗೆ 12 ಕಿ.ಮೀ ದೀಡು ನಮಸ್ಕಾರ ಹಾಕಿ ಎಲ್ಲರನ್ನೂ ಆಕರ್ಷಿಸಿದರು. ಗ್ರಾಮಸ್ಥರೊಂದಿಗೆ ಬೆಳಗ್ಗೆ ದೇವಸ್ಥಾನಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದ ನಂತರ ದೇವಸ್ಥಾನವು ಪ್ರಧಾನಿ ಮೋದಿ ಅವರ ಜೈಕಾರದಲ್ಲಿ ಮೊಳಗಿತ್ತು.

ಈ ವೇಳೆ ಮಾತನಾಡಿದ ಜಿ.ಡಿ. ಮಲ್ಲೇಶಪ್ಪ ಅವರು, ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿಯವರು ಗೆಲುವು ಸಾಧಿಸಿ, ಕೇಂದ್ರದಲ್ಲಿ ಮೋದಿ ನೇತೃತ್ವದ ಸರ್ಕಾರ ರಚನೆಯಾಗಬೇಕೆಂದು ಉಚ್ಚಂಗೆಮ್ಮ ದೇವಿಗೆ ಹರಕೆ ಕಟ್ಟಿಕೊಂಡಿದ್ದೆ. ಇಂದು ನನ್ನ ಬೇಡಿಕೆ ಈಡೇರಿದ ಕಾರಣ ಹರಕೆ ತೀರಿಸಿದ್ದೇನೆ ಎಂದು ತಿಳಿಸಿದರು.

ಈ ವೇಳೆ ಗ್ರಾ.ಪಂ ಸದಸ್ಯರಾದ ಅಂಗಡಿ ಪ್ರಕಾಶ, ಪೂಜಾರ ಈರಣ್ಣ, ಮುಖಂಡರಾದ ಲಕ್ಕಳ್ಳಿ ರುದ್ರಪ್ಪ, ಬಣಕಾರ ಮಲ್ಲಿಕಾರ್ಜುನ, ಕೆ. ಸೋಮಣ್ಣ, ಎಸ್. ಮಲ್ಲಿಕಾರ್ಜುನ, ತಳವಾರ ಪರಶುರಾಮ, ಶಿಂಗ್ರಿಹಳ್ಳಿ ಸಿದ್ದೇಶ, ಗುಂಡಗತ್ತಿ ಮಲ್ಲೇಶಪ್ಪ, ಮುನಿಯಪ್ಪ, ಮಂಜುನಾಥ್ ಸೇರಿದಂತೆ, ಇತರರು ಇದ್ದರು.


॥ ಶ್ರೀ ಆಂಜನೇಯಸ್ವಾಮಿ ಪ್ರಸನ್ನ ॥ ॥ಶ್ರೀ ಕೋಗುಂಡಿ ಬಸವೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ಜಿಲ್ಲೆ॥, ತಾ॥, ಹಳೇ ಕುಂದುವಾಡ ಗ್ರಾಮದ ವಾಸಿ
ಶ್ರೀ ದಿ. ನಂಜಪ್ಪರ ತಿಪ್ಪಣ್ಣ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.



ದಿನಾಂಕ : 07.06.2024ನೇ ಶುಕ್ರವಾರ ಸಂಜೆ 5.15ಕ್ಕೆ ನನ್ನ ಧರ್ಮಪತ್ನಿಯಾದ
**ಶರಣೆ ಶ್ರೀಮತಿ ದಿ. ನಂಜಪ್ಪರ ರತ್ನಮ್ಮ**
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 15.06.2024ನೇ ಶನಿವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾ. ಹಳೇಕುಂದುವಾಡ ಗ್ರಾಮದ ನಮ್ಮಸ್ವಗೃಹದಲ್ಲಿ ದಾವಣಗೆರೆಯಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದ ರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.


ದುಃಖತಪ್ತರು :
ಶ್ರೀಮತಿ ಶ್ರೀ ನಂಜಪ್ಪರ ಎನ್.ಟಿ. ನಾಗರಾಜ್
ಶ್ರೀಮತಿ ಶ್ರೀ ನಂಜಪ್ಪರ ಎನ್.ಟಿ. ಷಣ್ಮುಖ ಮತ್ತು ಮಕ್ಕಳು ಹಾಗೂ ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ನಿಟ್ಟುವಳ್ಳಿ ವಂಶಸ್ಥರು, ಹಳೇಕುಂದುವಾಡ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.
**ಮೊ : 99644 67907**

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿವಿನಂತಿ.



॥ ಶ್ರೀ ಕಲ್ಲೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ, ವಿದ್ಯಾನಗರ, 3ನೇ ಮೇನ್, 3ನೇ ಕ್ರಾಸ್ ವಾಸಿಯಾದ
ಶ್ರೀಮತಿ ದಾಕ್ಷಾಯಣಮ್ಮ ನಿಂಬೆಕಾಯಿ ದಿ. ನಿಂಬೆಕಾಯಿ ರಾಜಶೇಖರ್ ಇವರ ಮಗನಾದ
**ಶ್ರೀ ರವಿರಾಜ ನಿಂಬೆಕಾಯಿ ಆರ್.**
ಇವರು ದಿನಾಂಕ 08.06.2024ರಂದು ಶಿವಾಧೀನರಾಗಿರುತ್ತಾರೆ.
ಮೃತರ ದೇಹ ದಾನ ಬಾಪೂಜಿ ಆಸ್ಪತ್ರೆಗೆ ಹಾಗೂ ನೇತ್ರದಾನ ಮಾಡಿರುತ್ತಾರೆ.


ಶಿವಾಧೀನರಾದ ಪ್ರಯುಕ್ತ ದಿನಾಂಕ 16.06.2024ರಂದು 'ಕೈಲಾಸ ಶಿವಗಣಾರಾಧನೆ'ಯನ್ನು ಕಸ್ತೂರಬಾ ಸಮಾಜ, 3ನೇ ಕ್ರಾಸ್, 3ನೇ ಮೇನ್, ವಿದ್ಯಾನಗರ, ದಾವಣಗೆರೆ ಇಲ್ಲಿ ನೆರವೇರಿಸಲು ಗುರುಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ರೂಪ ರವಿರಾಜ, ಕು. ಗೌರಿ ಎನ್.ಆರ್., ಚಿ. ಪೃಥ್ವಿರಾಜ್ ಎನ್.ಆರ್, ಅಕ್ಕನಾದ ಶ್ರೀಮತಿ ಜ್ಯೋತಿ ಶಿವಪ್ರಕಾಶ್ ಮತ್ತು ಪಟ್ಟಣಶೆಟ್ಟಿ ವಂಶಸ್ಥರು, ನಿಂಬೆಕಾಯಿ ಕುಟುಂಬದವರು ಹಾಗೂ ಉಪ್ಪು ಹುಣಸೆ ವಂಶಸ್ಥರು ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



**ಭಾವಪೂರ್ಣ ಶ್ರದ್ಧಾಂಜಲಿ**



ಲಿಂ. ಅಂದನೂರು ಲಾರಿ ಕೊಟ್ರಪ್ಪನವರ ಸೊಸೆ ಹಾಗೂ ಲಿಂ. ಅಂದನೂರು ಬಸವರಾಜ್ ಅವರ ಧರ್ಮಪತ್ನಿ
**ಶ್ರೀಮತಿ ಅಂದನೂರು ಸುರೇಖ**
ಅವರು, ದಿನಾಂಕ 14.06.2024ರ ಶುಕ್ರವಾರ ನಿಧನರಾಗಿದ್ದು, ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

**ಅಂದನೂರು ಬಳಗ (ರಿ.)**


# ನೀಟ್ : ಸಿಬಿಐ ತನಿಖೆಗೆ ನೋಟಿಸ್

**(1ನೇ ಪುಟದಿಂದ)** ಎಂಬುವವರು ಸಿ.ಬಿ.ಐ. ತನಿಖೆಗಾಗಿ ಅರ್ಜಿ ಸಲ್ಲಿಸಿದ್ದರು. ಜುಲೈ 8ರಂದು ನ್ಯಾಯಾಲಯ ಈ ಅರ್ಜಿಯ ಜೊತೆ ನೀಟ್‌ಗೆ ಸಂಬಂಧಿಸಿದ ಉಳಿದ ಅರ್ಜಿಗಳ ವಿಚಾರಣೆ ಕೈಗೆತ್ತಿಕೊಳ್ಳಲಿದೆ.

ಈ ನಡುವೆ, ನೀಟ್ ಕುರಿತ ಅರ್ಜಿಗಳನ್ನು ಹೈಕೋರ್ಟ್‌ಗಳಿಂದ ಸುಪ್ರೀಂ ಕೋರ್ಟ್‌ಗೆ ವರ್ಗಾಯಿಸಬೇಕು ಎಂಬ ಅರ್ಜಿಯ ಹಿನ್ನೆಲೆಯಲ್ಲೂ ನೋಟಿಸ್‌ಗಳನ್ನು ಕಳಿಸಲಾಗಿದೆ. ಸುಪ್ರೀಂ ಕೋರ್ಟ್‌ನಲ್ಲೇ ವಿಚಾರಣೆ ನಡೆಸಬೇಕು ಎಂದು ನೀಟ್ ಪರೀಕ್ಷೆ ನಡೆಸುವ ಎನ್.ಟಿ.ಎ. ಅರ್ಜಿ ದಾಖಲಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದ ಖಾಸಗಿ ವ್ಯಕ್ತಿಗಳಿಗೆ ನೋಟಿಸ್‌ಗಳನ್ನು ಕಳಿಸಲಾಗಿದೆ.

# ಸಗಟು ಹಣದುಬ್ಬರ ಶೇ.2.61ಕ್ಕೆ ಏರಿಕೆ

**(1ನೇ ಪುಟದಿಂದ)** ಏರಿಕೆಯಾಗಿರುವುದು ಇದಕ್ಕೆ ಪ್ರಮುಖ ಕಾರಣ. ಕಳೆದ ಮೂರು ತಿಂಗಳಿಂದ ಸಗಟು ಹಣದುಬ್ಬರ ನಿರಂತರವಾಗಿ ಏರಿಕೆಯಾಗುತ್ತಿದೆ.

ಕಳೆದ ತಿಂಗಳು ಸಗಟು ಹಣದುಬ್ಬರ ಶೇ.1.26ರಷ್ಟಿತ್ತು. ಮೇ 2023ರಲ್ಲಿ ಸಗಟು ಹಣದುಬ್ಬರ ಋಣಾತ್ಮಕ ಶೇ.3.61ರಷ್ಟಿತ್ತು.

ಬಾಪೂಜಿ ವಿದ್ಯಾ ಸಂಸ್ಥೆ (ರಿ.)



# 94ರ ಅಮೃತ ಪುರುಷರಿಗೆ
# ಜನ್ಮದಿನದ ಶುಭಾಶಯಗಳು



**ಎಸ್.ಎಸ್. ಮಲ್ಲಿಕಾರ್ಜುನ್**
ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು
ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ,
ಜಂಟಿ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾ ಸಂಸ್ಥೆ






**ಡಾ|| ಪ್ರಭಾ ಮಲ್ಲಿಕಾರ್ಜುನ್**
ಸಂಸದರು, ದಾವಣಗೆರೆ ಲೋಕಸಭಾ ಕ್ಷೇತ್ರ
ಸದಸ್ಯರು, ಬಾಪೂಜಿ ವಿದ್ಯಾ ಸಂಸ್ಥೆ

ತೊಂಬತ್ತೂರು ವರ್ಷಗಳನ್ನು ಪೂರೈಸಿ ನಾಳೆಗೆ ತೊಂಬತ್ತನಾಲ್ಕಕ್ಕೆ ಪಾದಾರ್ಪಣೆ ಮಾಡಲಿರುವ, ಅಮೃತ ಪುರುಷರು, ಸರ್ವಧರ್ಮ ಸಮನ್ವಯದ ಪ್ರತಿಪಾದಕರು, ಆರನೇ ಬಾರಿಗೆ ವಿಧಾನಸಭೆ ಪ್ರವೇಶಿಸುವುದರ ಮೂಲಕ ಗಿನ್ನಿಸ್ ದಾಖಲೆಗೆ ಅರ್ಹರಾಗಿರುವ ಧೀಮಂತ ಜನನಾಯಕರು ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳೂ ಆದ

# ಡಾ. ಶಾಮನೂರು ಶಿವಶಂಕರಪ್ಪ

ಅವರಿಗೆ ಜನ್ಮದಿನದ ಶುಭಾಶಯಗಳು.
ಶ್ರೀಯುತರು ನೂರ್ಕಾಲ ಬಾಳಲಿ ಎಂದು ಹಾರೈಸುತ್ತೇವೆ.


ಆರ್. ರಮಾನಂದ್
ಅಧ್ಯಕ್ಷರು


ಕೆ.ಎ. ಗಿರಿಜಮ್ಮ
ಉಪಾಧ್ಯಕ್ಷರು


ಎ.ಎಸ್. ನಿರಂಜನ್
ಖಜಾಂಚಿ


ಡಾ|| ಎ.ಎಸ್. ವೀರಣ್ಣ
ಸದಸ್ಯರು


ಸಂಪನ್ನ ಮುತಾಲಿಕ್
ಸದಸ್ಯರು





**ಬಾಪೂಜಿ ವಿದ್ಯಾಸಂಸ್ಥೆ (ರಿ.), ದಾವಣಗೆರೆ.**

# ಹಳೇಭಾಗದ ನಾಗರಿಕರಿಗಾಗಿ ಸುಸಜ್ಜಿತ ಸಾರ್ವಜನಿಕ ಆಸ್ಪತ್ರೆ ನಿರ್ಮಾಣಕ್ಕೆ ಚಿಂತನೆ

**ಕೆ.ಆರ್. ರಸ್ತೆಯ ಎಸ್.ಎಸ್. ಸಾರ್ವಜನಿಕ ಆಸ್ಪತ್ರೆಯಲ್ಲಿ ಮತ್ತೆ ನಾಲ್ಕು ಡಯಾಲಿಸಿಸ್ ಯಂತ್ರಗಳನ್ನು ಉದ್ಘಾಟಿಸಿದ ಬಾಪೂಜಿ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿಯೂ ಆಗಿರುವ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ**



ದಾವಣಗೆರೆ, ಜೂ. 14- ನಗರದ ಕೆ.ಆರ್. ರಸ್ತೆಯಲ್ಲಿ ಹಳೇ ಭಾಗದ ಸಾರ್ವಜನಿಕರ ಹಿತದೃಷ್ಠಿಯಿಂದ ಬಾಪೂಜಿ ವಿದ್ಯಾ ಸಂಸ್ಥೆಯಿಂದ ಸುಸಜ್ಜಿತ ಸಾರ್ವಜನಿಕ ಆಸ್ಪತ್ರೆ ನಿರ್ಮಾಣ ಮಾಡಲಾಗುವುದು ಎಂದು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಹೇಳಿದರು.

ನಗರದ ಕೆ.ಆರ್. ರಸ್ತೆಯಲ್ಲಿರುವ ಬಾಪೂಜಿ ವಿದ್ಯಾಸಂಸ್ಥೆಯ ಎಸ್.ಎಸ್. ಸಾರ್ವಜನಿಕ ಆಸ್ಪತ್ರೆಯಲ್ಲಿ ಇಂದು ಏರ್ಪಾಡಾಗಿದ್ದ ಕಾರ್ಯಕ್ರಮದಲ್ಲಿ ಮತ್ತೆ ನಾಲ್ಕು ಡಯಾಲಿಸಿಸ್ ಯಂತ್ರಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಡವರು, ಮಧ್ಯಮ ವರ್ಗದವರೇ ಹೆಚ್ಚಾಗಿರುವುದನ್ನು ಮನಗಂಡು ಇಲ್ಲಿ ಸಾರ್ವಜನಿಕ ಆಸ್ಪತ್ರೆ ತರೆದು ಉಚಿತ ತಪಾಸಣೆ, ಚಿಕಿತ್ಸೆ ನೀಡಲಾಗುತ್ತಿದೆ. ಅಗತ್ಯ ಬೇಡಿಕೆಗಳಿಗೆ ಅನುಗುಣವಾಗಿ ಇದೀಗ ನಾಲ್ಕು ಡಯಾಲಿಸಿಸ್ ಯಂತ್ರಗಳನ್ನು ಅಳವಡಿಸಲಾಗಿದೆ. ಒಟ್ಟು ಹದಿನಾರು ಯಂತ್ರಗಳು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು.

ಈ ಆಸ್ಪತ್ರೆಯ ಹಿಂಭಾಗದ ಜಾಗವನ್ನು ಬಾಪೂಜಿ ಸಂಸ್ಥೆ ಖರೀದಿಸಿದ್ದು, ಇಲ್ಲಿ ಅತ್ಯಾಧುನಿಕ ಆಸ್ಪತ್ರೆಯನ್ನು ನಿರ್ಮಿಸಲಾಗುವುದು. ಶೀಘ್ರದಲ್ಲೇ ಯೋಜನೆ ರೂಪಿಸಿ, ಕಾಮಗಾರಿ ಆರಂಭಿಸುವುದಾಗಿ ಹೇಳಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಸೌಲಭ್ಯಗಳ ಕೊರತೆ ಇದ್ದು, ಇದನ್ನು ಅರಿತ ಎಸ್.ಎಸ್. ಕೇರ್ ಟ್ರಸ್ಟ್ ಈ ಭಾಗದ ಜನತೆಗೆ ಉತ್ತಮ ಆರೋಗ್ಯವನ್ನು ಕಲ್ಪಿಸುವ ಸದುದ್ದೇಶದಿಂದ ಅನೇಕ ಆರೋಗ್ಯ ಶಿಬಿರಗಳನ್ನು ಆಯೋಜಿಸುತ್ತಾ ಬರುತ್ತಿದೆ ಎಂದರು.

ಬೇರೆ ಆಸ್ಪತ್ರೆಗಳಲ್ಲಿ ಡಯಾಲಿಸಿಸ್‌ಗೆ 1200 ರಿಂದ 2000 ರೂ. ತೆಗೆದುಕೊಳ್ಳುತ್ತಿದ್ದಾರೆಂದು ಹೇಳಲಾಗುತ್ತಿದೆ. ನಮ್ಮ ಆಸ್ಪತ್ರೆಯಲ್ಲಿ ಸಂಪೂರ್ಣ ಉಚಿತವಾಗಿ ಡಯಾಲಿಸಿಸ್‌ಗೆ ಅವಕಾಶ ನೀಡಲಾಗಿದೆ.

ವೈದ್ಯರೂ ಸಹ ಯಾರೇ ಬಂದರೂ ಶಿಫಾರಸ್ಸು, ಮತ್ತಿತರೆ ಪತ್ರಗಳನ್ನು ಕೇಳದೇ ಮತ್ತು ಅಲೆದಾಡಿಸದೇ ಚಿಕಿತ್ಸೆ ನೀಡಬೇಕು. ಸಾವಿನ ದವಡೆಯಲ್ಲಿರುವ ಜನರ ಪ್ರಾಣ ರಕ್ಷಣೆ ಹೊಣೆ ವೈದ್ಯರದು ಎಂದು ಹೇಳಿದರು.

ನೂತನ ಸಂಸದರೂ, ಎಸ್.ಎಸ್. ಕೇರ್ ಟ್ರಸ್ಟ್‌ನ ಲೈಫ್ ಟ್ರಸ್ಟಿಯೂ ಆಗಿರುವ ಡಾ. ಪ್ರಭಾ ಮಲ್ಲಿಕಾರ್ಜುನ್ ಮಾತನಾಡಿ, 2019 ರಲ್ಲಿ ಕೇವಲ ನಾಲ್ಕು ಡಯಾಲಿಸಿಸ್ ಯಂತ್ರಗಳಿಂದ ಚಿಕಿತ್ಸೆ ಆರಂಭಿಸಲಾಗಿತ್ತು. ಇದೀಗ 16 ಯಂತ್ರಗಳನ್ನು ಹೊಂದಿದೆ. ಇದುವರೆಗೂ 16 ಸಾವಿರ ಜನರಿಗೆ ಉಚಿತವಾಗಿ ಡಯಾಲಿಸಿಸ್ ಮಾಡಲಾಗಿದೆ. ಪ್ರತಿ ತಿಂಗಳು 500 ಜನರು ಡಯಾಲಿಸಿಸ್ ಗೆ ಒಳಗಾಗುತ್ತಿದ್ದಾರೆ. ಇಲ್ಲಿನ ವೈದ್ಯರು ಮತ್ತು ಸಿಬ್ಬಂದಿ ಉತ್ತಮವಾಗಿ ಕೆಲಸ ಮಾಡುತ್ತಿರುವುದರಿಂದ ಇದು ಸಾಧ್ಯವಾಗಿದೆ ಎಂದರು.

ಎಸ್.ಎಸ್. ಕೇರ್ ಟ್ರಸ್ಟ್ ಮೂಲಕ ಅನೇಕ ಆರೋಗ್ಯ ಶಿಬಿರಗಳನ್ನು ಆಯೋಜಿಸುತ್ತಾ ಬರುತ್ತಿದ್ದು, ದಾವಣಗೆರೆ ತಾಲ್ಲೂಕಿನ ಕಕ್ಕರಗೊಳ್ಳ ಮತ್ತು ಅರಸಾಪುರ ಗ್ರಾಮಗಳನ್ನು 'ಹೆಲ್ತ್ ಆನ್ ವೀಲ್' ಆರೋಗ್ಯ ಯೋಜನೆಯಡಿ ದತ್ತು ತೆಗೆದುಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಎಸ್.ಎಸ್. ಸಾರ್ವಜನಿಕ ಆಸ್ಪತ್ರೆಯಲ್ಲಿ ಉಚಿತ ಡಯಾಲಿಸಿಸ್ ಸೇವೆಯನ್ನು ಸಮರ್ಪಕವಾಗಿ ಸಲ್ಲಿಸುತ್ತಿದ್ದು, ಮುಂದಿನ ದಿನಗಳಲ್ಲಿ ಕಿಡ್ನಿ ಸಮಸ್ಯೆ ಇರುವವರಿಗೆ ಉಚಿತ ಚಿಕಿತ್ಸೆ ಕೊಡಲಾಗುವುದು. ಆರಂಭಿಕ ಹಂತದಲ್ಲಿಯೇ ಕಿಡ್ನಿ ಸಮಸ್ಯೆ ಪತ್ತೆ ಹಚ್ಚಿ ಅದಕ್ಕೆ ಸೂಕ್ತ ಚಿಕಿತ್ಸೆ ನೀಡಲಾಗುವುದು. ಪಾಲಿಕೆ ಸದಸ್ಯರು, ಮುಖಂಡರು ತಮ್ಮ ಭಾಗದ ಜನರು ಅನಾರೋಗ್ಯದಿಂದ ಬಳಲುತ್ತಿರುವವರನ್ನು ಆರೋಗ್ಯ ಶಿಬಿರಗಳಿಗೆ ಕರೆತಂದು ತಪಾಸಣೆ, ಚಿಕಿತ್ಸೆ ಕೊಡಿಸಲು ಮುಂದಾಗಬೇಕೆಂದು ಕರೆ ನೀಡಿದರು.

ಎಸ್.ಎಸ್.ಕೇರ್ ಟ್ರಸ್ಟ್ ವತಿಯಿಂದ ಗರ್ಭಿಣಿಯರು, ಬಾಣಂತಿಯರಿಗೆ ಉಚಿತ ತಪಾಸಣೆ, ಕ್ಯಾನ್ಸರ್, ನೇತ್ರ, ದಂತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರಗಳನ್ನು ಏರ್ಪಡಿಸುತ್ತಾ ಬರಲಾಗಿದೆ. ಎಸ್ಸೆಸ್ ಅವರ ಆಶೀರ್ವಾದ, ಎಸ್ಸೆಸ್ಸಿಂ ಅವರ ಮಾರ್ಗದರ್ಶನದಲ್ಲಿ ಮೊಬೈಲ್ ಕ್ಲಿನಿಕ್ ವಾಹನದ ಮೂಲಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲದ ಗ್ರಾಮಗಳಿಗೆ ತೆರಳಿ ಉಚಿತ ಆರೋಗ್ಯ ಸೇವೆ ಮಾಡಲಾಗುತ್ತಿದೆ ಎಂದರು.

ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯೆ ಕಿರುವಾಡಿ ಗಿರಿಜಮ್ಮ, ಜಜಮು ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಶುಕ್ಲಶೆಟ್ಟಿ, ಬಾಪೂಜಿ ಆಸ್ಪತ್ರೆ ಆಡಳಿತಾಧಿಕಾರಿ ಸತ್ಯನಾರಾಯಣ, ನಿರಂಜನ್, ಸಂಪನ್ನ ಮುತಾಲಿಕ್, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್, ಚಮನ್ ಸಾಬ್, ಅಯೂಬ್ ಮತ್ತಿತರರಿದ್ದರು. ಬಾಪೂಜಿ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ. ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

## ಹೊಂದಾಣಿಕೆ ರಾಜಕೀಯ ಮಾಡಿದ್ದಾರೆಂಬ ಆರೋಪದಲ್ಲಿ ಹುರುಳಿಲ್ಲ : ಡಾ. ಪ್ರಭಾ



ದಾವಣಗೆರೆ, ಜೂ. 14-ಲೋಕಸಭಾ ಚುನಾವಣೆಯಲ್ಲಿ ರಾಜ್ಯ ಬಿಜೆಪಿ ನಾಯಕರೊಂದಿಗೆ ಹೊಂದಾಣಿಕೆ ರಾಜಕಾರಣ ಮಾಡಲಾಗಿದೆ ಎಂಬ ಕೆಲವರ ಆರೋಪದಲ್ಲಿ ಹುರುಳಿಲ್ಲ ಎಂದು ನೂತನ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೋಲನುಭವಿಸಿದ ಮೇಲೆ ಅದಕ್ಕೆ ನಾನಾ ಕಾರಣಗಳನ್ನು ಹೇಳಬಹುದು. ಕಳೆದ 25 ವರ್ಷಗಳಿಂದ ಗೆಲ್ಲುತ್ತಲೇ ಇದ್ದರು. ಆದರೆ, ಈ ಬಾರಿ ಮತದಾರರು ಮೋದಿ ವಿರೋಧಿ ಚುನಾವಣೆ ಎಂದೇ ಪರಿಗಣಿಸಿದ್ದರು. ಈ ಹಿಂದೆ ಯಾರೇ ಸ್ಪರ್ಧೆ ಮಾಡಿದರೂ ಮೋದಿ ನೋಡಿ ಮತ ಹಾಕುತ್ತಿದ್ದರು. ಆದರೆ ಈ ಬಾರಿ ಕಾಂಗ್ರೆಸ್ ನ ಪ್ರತಿಸ್ಪರ್ಧಿ ಮೋದಿ ಆಗಿದ್ದರು. ಹಾಗಾಗಿ ಇದೀಗ 25 ವರ್ಷಗಳ ಕಾಲ ದಾವಣಗೆರೆ ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿ ಹಿನ್ನಡೆ ವಿರೋಧಿಸಿ ನನಗೆ ಮತ ಹಾಕಿದ್ದಾರೆಂದು ಹೇಳಿದರು.

ಪ್ರಥಮ ಬಾರಿ ಸಂಸದೆಯಾಗಿ ಸಂಸತ್ ಭವನ ಪ್ರವೇಶಿಸಿದಾಗ ಅಲ್ಲಿನ ವಿಶೇಷತೆ ಗಮನಿಸಿದಾಗ ಅತೀವ ಸಂತೋಷವಾಯಿತು. ಮೊದಲ ಪ್ರಧಾನಿಯಿಂದ ಹಿಡಿದು ಅನೇಕ ಹಿರಿಯ ಧುರೀಣರ ಭಾವಚಿತ್ರಗಳನ್ನು ನೋಡಿದಾಗ ನನ್ನನ್ನು ಆಯ್ಕೆ ಮಾಡಿ ಕಳುಹಿಸಿದ ಮತದಾರರು, ಶಾಸಕರು, ಕಾರ್ಯಕರ್ತರನ್ನು ನೆನಪಿಸಿಕೊಂಡು ಧನ್ಯವಾದ ಹೇಳಿದೆ ಎಂದರು.

ಕ್ಷೇತ್ರದ ಜನರ ಆಶೋತ್ತರಗಳನ್ನು ಈಡೇರಿಸುವುದೇ ನನ್ನ ಮೊದಲ ಆದ್ಯತೆ. ಇನ್ನು ಸಂಸದೆಯಾಗಿ ಪ್ರಮಾಣ ವಚನ ಸ್ವೀಕರಿಸಿಲ್ಲ. ಇದೇ 24 ರಿಂದ ಜುಲೈ 4 ರವರೆಗೆ ನಡೆಯುವ ಮೊದಲ ಅಧಿವೇಶನದಲ್ಲಿ ಭಾಗವಹಿಸಿ, ಕ್ಷೇತ್ರದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತುತ್ತೇನೆ. ಅಭಿವೃದ್ಧಿ ಜೊತೆಗೆ ಐಟಿ-ಬಿಟಿ ಕೈಗಾರಿಕೆಗಳನ್ನು ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆಂದರು.

## ಕುವೈತ್ ಬೆಂಕಿ ಅವಘಡ : ಇನ್ನೋರ್ವ ಭಾರತೀಯನ ಸಾವು

ಕುವೈತ್ ಸಿಟಿ, ಜೂ. 14 – ಕುವೈತ್‌ನಲ್ಲಿ ಸಂಭವಿಸಿದ ಭಾರೀ ಬೆಂಕಿ ಅವಘಡದಲ್ಲಿ ಇನ್ನೋರ್ವ ಭಾರತೀಯ ಸಾವನ್ನಪ್ಪಿದ್ದು, ಒಟ್ಟು ಮೃತ ಭಾರತೀಯರ ಸಂಖ್ಯೆ 46ಕ್ಕೆ ಏರಿಕೆಯಾಗಿದೆ. ಅವಘಡದಲ್ಲಿ 50 ಜನರು ಮೃತಪಟ್ಟಿದ್ದರು. ಆರು ಮಹಡಿ ಕಟ್ಟಡದಲ್ಲಿ ಬುಧವಾರ ಬೆಂಕಿ ಕಾಣಿಸಿಕೊಂಡಿತ್ತು. ಕಟ್ಟಡದಲ್ಲಿ 196 ಜನರಿದ್ದರು. ಇವರಲ್ಲಿ ಬಹುತೇಕರು ಭಾರತೀಯರು. ಅವಘಡದಲ್ಲಿ ಗಾಯಗೊಂಡಿದ್ದ ಒಬ್ಬರು ತಡರಾತ್ರಿ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಫಿಲಿಪೈನ್ಸ್‌ನ ಮೂವರು ಸಾವನ್ನಪ್ಪಿದ್ದಾರೆ. ಇನ್ನೊಬ್ಬರ ಗುರುತು ಪತ್ತೆಯಾಗಿಲ್ಲ.

## ಹಿರಿಯ ವನಿತೆಯರ ಆನಂದ ಧಾಮದಲ್ಲಿ ಸೀರೆ, ಬೆಡ್ ಶೀಟ್ ವಿತರಣೆ

**94ರ ಸಂಭ್ರಮದಲ್ಲಿ ಎಸ್ಸೆಸ್ : ದಿನೇಶ್ ಶೆಟ್ಟಿ ನೇತೃತ್ವದಲ್ಲಿ ಸೇವಾ ಕಾರ್ಯಕ್ರಮ**

ದಾವಣಗೆರೆ, ಜೂ. 14 - ಹಿರಿಯ ಶಾಸಕರಾದ ಶಾಮನೂರು ಶಿವಶಂಕರಪ್ಪ ಅವರ 94ನೇ ವರ್ಷದ ಜನ್ಮ ದಿನದ ಅಂಗವಾಗಿ ಇಂದು ನಗರದ ವನಿತಾ ಸಮಾಜದ ಹಿರಿಯ ವನಿತೆಯರ ಆನಂದಧಾಮದಲ್ಲಿನ ಹಿರಿಯ ವನಿತೆಯರಿಗೆ ಸೀರೆ ಮತ್ತು ಬೆಡ್ ಶೀಟ್‌ಗಳನ್ನು ವಿತರಿಸಿ ಸಿಹಿ ಊಟ ನೀಡಲಾಯಿತು.

93 ವರ್ಷಗಳ ಸಾರ್ಥಕ ಜೀವನ ನಡೆಸಿರುವ ಎಸ್ಸೆಸ್ 94ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವುದಕ್ಕೆ ತುಂಬು ಹೃದಯದ ಶುಭಾಶಯ ಕೋರಿದ ಹಿರಿಯ ವನಿತೆಯರು, ಎಸ್ಸೆಸ್ ಜೀವನ ಆದರ್ಶಮಯ ವಾಗಿದ್ದು, ಅವರಿಗೆ ದೇವರು ದೀರ್ಘಾಯುಷ್ಯ ನೀಡಲಿ ಎಂದು ಹಾರೈಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಡಿಸಿಸಿ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್, ಉತ್ತರ ವಿಧಾನಸಭಾ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್, ಅಯೂಬ್ ಪೈಲ್ವಾನ್, ವನಿತಾ ಸಮಾಜದ ಲತೀಕಾ ಶೆಟ್ಟಿ, ಸುನಿತಾ ಇಂಧೂಧರ್, ಮುಖಂಡ ಸುರಭಿ ಶಿವಮೂರ್ತಿ ಮತ್ತಿತರರು ಮಾತನಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ದ್ರಾಕ್ಷಾಯಣಮ್ಮ, ರಾಜೇಶ್ವರಿ, ಮಂಗಳಮ್ಮ, ಮಂಜಮ್ಮ, ಶುಭಮಂಗಳ, ರಾಜು ಭಂಡಾರಿ, ಯುವರಾಜ್, ಸಲ್ಮಾಬಾನು, ಕಮಲಮ್ಮ, ಹರೀಶ್ ವನಿತಾ ಸಮಾಜದ ಸುನೀತಾ ವೀರನಾರಾಯಣ, ಶೀಲಾ ನಲ್ಲೂರು ಇನ್ನೂ ಮುಂತಾದವರು ಇದ್ದರು.



## ನಗರಕ್ಕೆ ಇಂದು ಶ್ರೀಶೈಲ ಜಗದ್ಗುರುಗಳು





ಶ್ರೀಶೈಲ ಪೀಠದ ಹಿರಿಯ ಜಗದ್ಗುರು ಶ್ರೀ ವಾಗೀಶ ಪಂಡಿತ ರಾಧ್ಯ ಶಿವಾಚಾರ್ಯ ಮಹಾಸ್ವಾಮಿ ಗಳವರ ಪುಣ್ಯಾರಾಧನೆ ಹಾಗೂ ಧರ್ಮ ಸಭೆ ನಡೆಸುವ ಸಂಬಂಧ ನಗರದ ಶ್ರೀ ಜಗದ್ಗುರು ಪಂಚಾಚಾರ್ಯ ಮಂದಿರ ಆವರಣದಲ್ಲಿರುವ ಶ್ರೀ ಶಾಮನೂರು ಸಾವಿತ್ರಮ್ಮ ಕಲ್ಲಪ್ಪ ಕಲ್ಯಾಣ ಮಂಟಪದಲ್ಲಿ ಪೂರ್ವಭಾವಿ ಸಭೆಯನ್ನು ಇಂದು ಸಂಜೆ 4 ಗಂಟೆಗೆ ಕರೆಯಲಾಗಿದೆ. ಶ್ರೀಶೈಲ ಪೀಠದ ಜಗದ್ಗುರು ಡಾ॥ ಚನ್ನ ಸಿದ್ದರಾಮ ಪಂಡಿತರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ಸಭೆಯ ಸಾನ್ನಿಧ್ಯ ವಹಿಸುವರು.

## ದಾವಿವಿಯಲ್ಲಿ ಇಂದಿನಿಂದ ರಾಜ್ಯ ಮಟ್ಟದ ಯುವಜನೋತ್ಸವ

ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಇಂದಿನಿಂದ ಇದೇ ದಿನಾಂಕ 19ವರೆಗೆ ಐದು ದಿನಗಳ ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಮಟ್ಟದ ಯುವಜನೋತ್ಸವ-2024 ಏರ್ಪಡಿಸಲಾಗಿದೆ. ರಾಜ್ಯದ ನೂರಕ್ಕೂ ಹೆಚ್ಚು ಕಾಲೇಜುಗಳ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಲಿದ್ದು, ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆ, ರಸಪ್ರಶ್ನೆ, ಪ್ರಹಸನ, ಚಿತ್ರಕಲಾ, ನೃತ್ಯ, ವಸ್ತು ಪ್ರದರ್ಶನ, ಸುಗಮ ಸಂಗೀತ, ಸಮೂಹ ಗಾಯನ ಸ್ಪರ್ಧೆಗಳು ನಡೆಯಲಿವೆ.

ವಿಶ್ವವಿದ್ಯಾನಿಲಯದ ಎಂಬಿಎ ಸಭಾಂಗಣದಲ್ಲಿ ಇಂದು ನಡೆಯುವ ಯುವಜನೋತ್ಸವವನ್ನು ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದಾರೆ. ಕುಲಪತಿ ಪ್ರೊ.ಬಿ.ಡಿ.ಕುಂಬಾರ ಅಧ್ಯಕ್ಷತೆ ವಹಿಸಲಿದ್ದಾರೆ. ಚಲನಚಿತ್ರ ನಟ ನೀರ್ನಳ್ಳಿ ರಾಮಕೃಷ್ಣ ವಿಶೇಷ ಆಹ್ವಾನಿತರಾಗಿ ಆಗಮಿಸುವರು. ಎನ್‌ಎಸ್‌ಎಸ್ ಪ್ರಾಂತೀಯ ನಿರ್ದೇಶಕ ಡಿ.ಕಾರ್ತಿಕೇಯನ್, ರಾಜ್ಯ ಅಧಿಕಾರಿ ಡಾ.ಪ್ರತಾಪ್ ಲಿಂಗಯ್ಯ, ಪರೀಕ್ಷಾಂಗ ಕುಲಸಚಿವ ಪ್ರೊ.ಸಿ.ಕೆ.ರಮೇಶ, ಹಣಕಾಸು ಅಧಿಕಾರಿ ದ್ಯಾಮನಗೌಡ ಮುದ್ದನಗೌಡ್ರ ಅತಿಥಿಗಳಾಗಿ ಭಾಗವಹಿಸುವರು.

## ಜಗಳೂರು ತಾಲ್ಲೂಕಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಬಿಳಿಚೋಡು, ಪಲ್ಲಾಗಟ್ಟೆ ಮತ್ತು ಸೊಕ್ಕೆ 66/11 ಕೆ.ವಿ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಕೈಗೊಳ್ಳುವುದರಿಂದ ಈ ಮಾರ್ಗದಿಂದ ಪೂರೈಕೆಯಾಗುವ ಸ್ಥಳಗಳಲ್ಲಿ ಇಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ಎನ್.ಜೆ.ವೈ ಮತ್ತು ಐ.ಪಿ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವುಂಟಾಗಲಿದೆ.

## ನಗರದಲ್ಲಿ ನಾಳೆ ಕೀಲು - ಮೂಳೆಗಳಿಗೆ ಚಿಕಿತ್ಸೆ

ದಾವಣಗೆರೆ, ಜೂ.14- ಕೀಲು-ಮೂಳೆಗಳು ಮತ್ತು ಇತರೆ ಆರೋಗ್ಯ ಉಚಿತ ಚಿಕಿತ್ಸಾ ಶಿಬಿರವು ನಾಡಿದ್ದು ದಿನಾಂಕ 16ರ ಭಾನುವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 2ರವರೆಗೆ ನಗರದ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದ ಬಳಿ ಇರುವ ಅನುಪ ಹಾಸ್ಪಿಟಲ್‌ನಲ್ಲಿ ನಡೆಯಲಿದೆ.

ವಿವರಕ್ಕೆ ಮೊಬೈಲ್ : 96321 31626 ಅಥವಾ 78928 34138 ರಲ್ಲಿ ಸಂಪರ್ಕಿಸಬಹುದು.


## ಬನ್ನಿಕೋಡಿನಲ್ಲಿ ಇಂದು ವಾರ್ಷಿಕ ವಿಶೇಷ ಶಿಬಿರ

ದಾವಣಗೆರೆ ವಿಶ್ವವಿದ್ಯಾನಿಲಯ, ಧರಾಮ ವಿಜ್ಞಾನ ಪದವಿ ಪೂರ್ವ ಕಾಲೇಜಿನ (ದಾವಣಗೆರೆ) ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಬನ್ನಿಕೋಡು ಗ್ರಾಮಸ್ಥರ ಸಂಯುಕ್ತಾಶ್ರಯದಲ್ಲಿ ವಾರ್ಷಿಕ ವಿಶೇಷ ಶಿಬಿರವನ್ನು ಬನ್ನಿಕೋಡಿನಲ್ಲಿ ಇಂದಿನಿಂದ ದಿನಾಂಕ ಇದೇ 21ರವರೆಗೆ ಏರ್ಪಡಿಸಲಾಗಿದೆ.

ಇಂದು ಸಂಜೆ 5ಕ್ಕೆ ಗ್ರಾಮ ಪಥಸಂ ಚಲನ, ಸಂಜೆ 6ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆ ಯನ್ನು ಹೆಚ್.ಹೆಚ್. ಬಸವರಾಜ್ ವಹಿಸು ವರು. ಖಜಾಂಚಿ ಎ.ಎಸ್. ನಿರಂಜನ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಎಂ.ಪಿ. ರೂಪಶ್ರೀ, ಪ್ರೊ. ಸಿ.ಹೆಚ್. ಮುರುಗೇಂದ್ರಪ್ಪ, ಡಾ. ಅಶೋಕ್ ಕುಮಾರ್ ವಿ.ಪಾಳೇದ, ಶ್ರೀಮತಿ ಮೀನಾಕ್ಷಿ ಕೋಂ ರವಿಕುಮಾರ್ ಎಸ್.ಬಿ., ಕೆ.ಎಸ್. ಬಸವರಾಜು ಬಿನ್ ಸದಾಶಿವಪ್ಪ, ಡಾ. ರೇಣುಕಾಬಾಯಿ, ಜೆ.ಶಿವಪ್ಪ, ಲಿಂಗರಾಜು ಜೆ.ಆರ್., ಪಿ. ವೀರಪ್ಪ, ಕೆ.ಮರಿಸಿದ್ದಪ್ಪ, ಜಿ.ಹೆಚ್. ರಾಮನಗೌಡ್ರು, ಪಿ.ಎನ್. ವಾಗೀಶ್, ಹೆಚ್. ಹನುಮಂತಪ್ಪ, ಶಿವರಾಜ್ ಎಸ್. ಭಾಗವಹಿಸುವರು.

## ನಗರದಲ್ಲಿ ಇಂದು 'ಸ್ವರಾಭರಣ' ಕಾರ್ಯಕ್ರಮ





**ಕಾರ್ಯಕ್ರಮಕ್ಕೆ ಹಿರಿಯ ಸಾಹಿತಿಗಳಾದ ಬಿ.ಆರ್. ಲಕ್ಷ್ಮಣ್‌ರಾವ್, ಹೆಚ್. ಡುಂಡಿರಾಜ್ ಮುಖ್ಯ ಅತಿಥಿಗಳು**

ಕರ್ನಾಟಕ ಸುಗಮ ಸಂಗೀತ ಪರಿಷತ್, ಅನುಶ್ರೀ ಸಂಗೀತ ಶಾಲೆ ಹಾಗೂ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಇಂದು ಸಂಜೆ 5 ಗಂಟೆಗೆ ವಿನ್ನರ್ಸ್ ಅಕಾಡೆಮಿ ಸಭಾಂಗಣದಲ್ಲಿ ಸ್ಥಳೀಯ ಕವಿಗಳ ಪದ್ಯಗಾಯನ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್‌ನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿದುಷಿ ಶ್ರೀಮತಿ ಸಂಗೀತಾ ರಾಘವೇಂದ್ರ ತಿಳಿಸಿದ್ದಾರೆ.

ಸಮಾರಂಭದ ಉದ್ಘಾಟನೆಯನ್ನು ನಾಡಿನ ಹಿರಿಯ ಕವಿ, ಸಾಹಿತಿ ಬಿ.ಆರ್. ಲಕ್ಷ್ಮಣ್‌ರಾವ್ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಸಾಲಿಗ್ರಾಮ ಗಣೇಶ್ ಶೆಣೈ ವಹಿಸಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ಚುಟುಕು ಕವಿ ಹೆಚ್. ಡುಂಡಿರಾಜ್ ಆಗಮಿಸಲಿದ್ದಾರೆ. ಅನುಶ್ರೀ ಸಂಗೀತ ಶಾಲೆಯ ಸಂಸ್ಥಾಪಕ ವಿದುಷಿ ಶ್ರೀಮತಿ ವೀಣಾ ಸದಾನಂದ ಹೆಗಡೆ ಅವರು 'ಸ್ವರಾಭರಣ' ಪ್ರಸ್ತುತಿ ನಡೆಸಿಕೊಡಲಿದ್ದಾರೆ. ಶಿವರಾಜ್ ಕಬ್ಬೂರು, ಪೋಟಪ್‌ಲಾಲ್‌ಜೈನ್, ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ ಉಪಸ್ಥಿತರಿರುತ್ತಾರೆ.

'ಸ್ವರಾಭರಣ' ಸ್ವರ ಸಂಯೋಜಿಸಲಾದ ಪದ್ಯ ರಚಿಸಿದ ಕವಿ, ಕವಯತ್ರಿ ಮಲ್ಲಿಕಾರ್ಜುನ ಕಲಮರಹಳ್ಳಿ, ಬಿ.ಎನ್. ಮಲ್ಲೇಶ್, ಆನಂದ ಋಗ್ವೇದಿ, ಶ್ರೀಮತಿ ನಾಗರತ್ನ ಮಲ್ಲಿಕಾರ್ಜುನ, ಶ್ರೀಮತಿ ಸತ್ಯಭಾಮ ಮಂಜುನಾಥ್, ಸಂತೇಬೆನ್ನೂರು ಫೈಜ್‌ನಟರಾಜ್ ಮುಂತಾದವರು ಉಪಸ್ಥಿತರಿರುತ್ತಾರೆ.

## ಅಣಜಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ರಶ್ಮಿ





ದಾವಣಗೆರೆ, ಜೂ. 14 - ತಾಲ್ಲೂಕು ಅಣಜಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕೆ.ಎಸ್. ರಶ್ಮಿ ಉಪಾಧ್ಯಕ್ಷರಾಗಿ ಬಸವಂತಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯೂ ಆದ ಮುಖ್ಯಕಾರ್ಯನಿರ್ವಾಹಣಧಿಕಾರಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಗ್ರಾಹಕರ ಸಂವಾದ ಕಾರ್ಯಕ್ರಮ

ದಾವಣಗೆರೆ, ಜೂ.13- ನಗರ ಉಪ ವಿಭಾಗ - 1 ರ ವತಿಯಿಂದ ನಾಡಿದ್ದು ದಿನಾಂಕ 15 ರ ಶನಿವಾರ ಮಧ್ಯಾಹ್ನ 3 ರಿಂದ 5.30 ರವರೆಗೆ ಗ್ರಾಹಕರ ಸಂವಾದ ಕಾರ್ಯಕ್ರಮವನ್ನು ನಗರದ ಬೆ.ವಿ.ಕಂ. ನಗರ ಉಪ ವಿಭಾಗ-1, ಹಮ್ಮಿಕೊಳ್ಳಲಾಗಿದೆ. ನಗರ ಉಪ ವಿಭಾಗ-1ರ ವ್ಯಾಪ್ತಿಗೆ ಬರುವ ಗ್ರಾಹಕರು ತಮ್ಮ ಅಹವಾಲುಗಳೇನಾದರೂ ಇದ್ದಲ್ಲಿ ಮಧ್ಯಾಹ್ನ 3 ಗಂಟೆಗೆ ಹಾಜರಾಗಬೇಕೆಂದು ಬೆಸ್ಕಾಂ ತಿಳಿಸಿದೆ.

## ತೆಲಂಗಾಣ ಪಠ್ಯದಲ್ಲಿ ಮಾಜಿ ಸಿಎಂ ಮುನ್ನುಡಿ!

ಹೈದರಾಬಾದ್, ಜೂ. 14 – ತೆಲಂಗಾಣದಲ್ಲಿ ಶಾಲಾ ಮಕ್ಕಳಿಗೆ ವಿತರಿಸಲಾದ ಪಠ್ಯಪುಸ್ತಕದಲ್ಲಿ ಹಿಂದಿನ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರ ಮುನ್ನುಡಿ ಇರುವ ಪುಟ ಪ್ರಕಟವಾಗಿದೆ. ಇದರಿಂದಾಗಿ ಹಾಲಿ ಕಾಂಗ್ರೆಸ್ ಸರ್ಕಾರ ತೀವ್ರ ಮುಜುಗರಕ್ಕೆ ಗುರಿಯಾಗಿದೆ.

1ರಿಂದ ಹತ್ತನೇ ತರಗತಿಯ ಮಕ್ಕಳಿಗೆ ಹಳೆಯ ಮುನ್ನುಡಿ ಇರುವ ಪುಸ್ತಕಗಳನ್ನು ವಿತರಿಸಲಾಗಿದೆ. ಜೂನ್ 12ರಿಂದ ಶಾಲೆಗಳು ಪುನರಾರಂಭವಾಗಿವೆ. ಅಧಿಕಾರಿಗಳು ಮೊದಲು ಪಠ್ಯಪುಸ್ತಕವನ್ನು ವಾಪಸ್ ಪಡೆಯಲು ನಿರ್ಧರಿಸಿದ್ದರು. ನಂತರ ಮುನ್ನುಡಿಯ ಪುಟಕ್ಕೆ ತೇಪೆ ಹಚ್ಚಿ ಮರೆ ಮಾಚಲು ನಿರ್ಧರಿಸಿದ್ದಾರೆ. ಶಾಲಾ ಮಕ್ಕಳಿಗೆ ಇನ್ನೂ ಪಠ್ಯಪುಸ್ತಕ ವಿತರಿಸಿಲ್ಲ. ಇನ್ನೂ ಕೆಲ ತಿದ್ದುಪಡಿಗಳು ಆಗಬೇಕಿದೆ ಎಂದು ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಸ್ಪಷ್ಟನೆ ನೀಡಿದ್ದಾರೆ. ಈ ಬಗ್ಗೆ ತನಿಖೆ ನಡೆಸಿ ಲೋಪ ಎಸಗಿದ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ತೆಲಂಗಾಣ ರಾಜ್ಯ ಶಿಕ್ಷಕರ ಒಕ್ಕೂಟ ಆಗ್ರಹಿಸಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸಿದ್ದವೀರಪ್ಪ ಬಡಾವಣೆಯ 9, 10, 11, 12, 13 ಮತ್ತು 14ನೇ ಕ್ರಾಸ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದಲ್ಲಿ ಇಂದಿನಿಂದ ಧ್ಯಾನ ಶಿಬಿರ

ಇಂದಿನಿಂದ 10 ದಿನಗಳ ಕಾಲ ಪ್ರತಿದಿನ ಸಂಜೆ 6.30 ರಿಂದ 8ರವರೆಗೆ ಎಂ.ಸಿ.ಸಿ. ಬಿ ಬ್ಲಾಕ್ 8ನೇ ಮುಖ್ಯ ರಸ್ತೆ, 7ನೇ ತಿರುವಿನಲ್ಲಿರುವ ದಿವ್ಯ ಯೋಗ ಮಂದಿರದಲ್ಲಿ ಪ್ರಾಣಾಯಾಮ ಧ್ಯಾನ ಶಿಬಿರ ನಡೆಯಲಿದೆ.

## ಬಿ.ಎಸ್.ಯಡಿಯೂರಪ್ಪ ಬಂಧನಕ್ಕೆ ಕಾಂಗ್ರೆಸ್ ಷಡ್ಯಂತ್ರ

**ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಆಕ್ರೋಶ**



ದಾವಣಗೆರೆ, ಜೂ. 14- ಪೋಕ್ಸೋ ಕಾಯ್ದೆ ಅಡಿ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರನ್ನು ಬಂಧಿಸಿದರೆ ಕಾಂಗ್ರೆಸ್ ಪತನ ಆಗುತ್ತದೆ. ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ರಣದೀಪ್ ಸಿಂಗ್ ಸುರ್ಜೇವಾಲ ಅವರು ಸಿಎಂ ಸಿದ್ಧರಾಮಯ್ಯ ಅವರ ಮೇಲೆ ಒತ್ತಡ ಹೇರಿ ಬಿಎಸ್‌ವೈ ಬಂಧನಕ್ಕೆ ಷಡ್ಯಂತ್ರ ರೂಪಿಸಲಾಗಿದೆ ಎಂದು ಮಾಜಿ ಸಚಿವ ಎಂ. ಪಿ. ರೇಣುಕಾಚಾರ್ಯ ಆರೋಪಿಸಿದರು.

ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಡಿಯೂರಪ್ಪ ಅವರನ್ನು ಬಂಧಿಸಬಹುದು ಎಂಬ ಗೃಹ ಸಚಿವ ಜಿ. ಪರಮೇಶ್ವರ್ ಅವರು ನೀಡಿರುವ ಹೇಳಿಕೆ ರಾಜಕೀಯ ಪ್ರೇರಿತ. ಪೋಕ್ಸೋ ಕೇಸ್ ಆಗಿ 45 ಕ್ಕೂ ಹೆಚ್ಚು ದಿನಗಳಾಗಿವೆ. ಗೃಹ ಸಚಿವರೇ ಹೇಳುವಂತೆ ಮಮತಾ ಎಂಬ ಮಹಿಳೆ ಐಎಎಸ್, ಐಪಿಎಸ್ ಸೇರಿದಂತೆ 53 ಅಧಿಕಾರಿಗಳು, ಉದ್ಯಮಿಗಳ ಮೇಲೆ ಕೇಸ್ ಹಾಕಿದ್ದರು. ಈಕೆ ಮಾನಸಿಕ ಅಸ್ವಸ್ಥ ಎಂದಿದ್ದರು. ಮಮತಾ ಕಾಯಿಲೆಯಿಂದ ಮೃತಪಟ್ಟಿದ್ದಾರೆ. ಆದರೆ ಇದ್ದಕ್ಕಿದ್ದಂತೆ ಯಡಿಯೂರಪ್ಪ ಅವರಿಗೆ ಬಂಧನದ ನೋಟೀಸ್ ಜಾರಿ ಏಕೆ ಎಂದು ಪ್ರಶ್ನಿಸಿದರು.

ಮಮತಾ ಎಂಬ ಮಹಿಳೆ ಬದುಕಿದ್ದಾಗ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಮಗಳಿಗೆ ಅನ್ಯಾಯ ಆಗಿದೆ. ಗಂಡನ ಸಹೋದರ ಸಂಬಂಧಿಗಳು ಮುಗ್ಧ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದು, ಇಬ್ಬರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದರು. ಈಗ ಆ ಮಹಿಳೆ ಸಾವನ್ನಪ್ಪಿದ್ದು, ಆಕೆ ಪುತ್ರನಿಗೆ ಆಸೆ, ಆಮಿಷವೊಡ್ಡಿ ಪ್ರಭಾವಿ ಮಂತ್ರಿಯೊಬ್ಬರು ಯಡಿಯೂರಪ್ಪ ಅವರನ್ನು ಸಂಕಷ್ಟಕ್ಕೆ ಸಿಲುಕಿಸಲು ಹೂಡಿರುವ ಸಂಚು ಇದಾಗಿದೆ. ಎಲ್ಲಾ ಮಾಹಿತಿ ನನ್ನಲ್ಲಿದೆ. 53 ಜನರ ವಿಚಾರಣೆ ಯಾಕೆ ನಡೆಸಿಲ್ಲ. ಅತ್ಯಾಚಾರ ಎಸಗಿದೆ ಇಬ್ಬರನ್ನು ಇದುವರೆಗೂ ಏಕೆ ಬಂಧಿಸಿಲ್ಲ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ತನ್ನ ಭ್ರಷ್ಟಾಚಾರ ಮುಚ್ಚಿ ಹಾಕಲು ಯಡಿಯೂರಪ್ಪ ಅವರ ಮೇಲೆ ಸೇಡಿನ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಭಾವಿ ಸಚಿವರೊಬ್ಬರು ಆಮಿಷವೊಡ್ಡಿ ಬಾಲಕಿ ಸಹೋದರನಿಂದ ಬಲವಂತವಾಗಿ ಕೇಸು ದಾಖಲಿಸಿದ್ದಾರೆ. ಎರಡು ದಿನಗಳ ಹಿಂದೆ ಸಿಐಡಿಯವರು ನೋಟೀಸ್ ಕೊಟ್ಟದ್ದಾರೆ.

ಜೂ. 17 ಕ್ಕೆ ವಿಚಾರಣೆಗೆ ಹಾಜರಾಗುತ್ತೇನೆ ಎಂದಿದ್ದ ಯಡಿಯೂರಪ್ಪ ತಲೆಮರೆಸಿಕೊಂಡಿಲ್ಲ. ಸಾಕ್ಷ್ಯ ನಾಶ ಮಾಡ್ತಾರೆ ಎಂಬ ಕಾರಣವೊಡ್ಡಿ ವಶಕ್ಕೆ ಸಿಐಡಿ ಅಧಿಕಾರಿಗಳು ಕೇಳುತ್ತಿದ್ದಾರೆ. ಯಡಿಯೂರಪ್ಪ ಮತ್ತು ಕೆಲವರನ್ನು ಬಂಧಿಸಿದರೆ ಸರ್ಕಾರಕ್ಕೆ ಕೆಟ್ಟ ಹೆಸರು. ಸರ್ಕಾರ ಪತನವಾಗುತ್ತದೆ ಎಂಬ ಕಾರಣಕ್ಕಾಗಿ ಕಾಂಗ್ರೆಸ್ ನಾಯಕರು ಬಿಎಸ್‌ವೈ ವಿರುದ್ಧ ಷಡ್ಯಂತ್ರ ರೂಪಿಸಿದ್ದಾರೆಂದು ದೂರಿದರು.

ದ್ವೇಷದ ರಾಜಕಾರಣವನ್ನು ರಾಜ್ಯದ ಜನತೆ ಒಪ್ಪುವುದಿಲ್ಲ. ಮೊದಲು 53 ಜನರನ್ನು ಬಂಧಿಸಿ, ಬಾಲಕಿಯ ಹಿಂದೆ ಯಾರಿದ್ದಾರೆಂದು ನನಗೆ ಗೊತ್ತು. ಸದ್ಯದಲ್ಲಿಯೇ ಬಹಿರಂಗಪಡಿಸುತ್ತೇನೆ. ಸುಳ್ಳು ಕೇಸಿಗೆ ಯಾವುದೇ ಕಾರಣಕ್ಕೂ ಬಿಎಸ್‌ವೈ ಬಗ್ಗಲ್ಲ, ಜಗ್ಗಲ್ಲ. ಅವರಿಗೆ ನ್ಯಾಯ ಸಿಕ್ಕೇ ಸಿಗುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಮುಖಂಡರಾದ ಮಾಡಾಳ್ ಮಲ್ಲಿಕಾರ್ಜುನ್, ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಪ್ರಧಾನ ಕಾರ್ಯದರ್ಶಿ ಧನಂಜಯ ಕಡ್ಲೇಬಾಳ್, ವಕ್ತಾರ ಬಿ.ಎಂ. ಸತೀಶ್ ಕೊಳೇನಹಳ್ಳಿ ಉಪಸ್ಥಿತರಿದ್ದರು.

## ನಾಳೆ ವೀರಶೈವ ಲಿಂಗಾಯತ ನೌಕರರ ಪತ್ತಿನ ಸಹಕಾರ ಸಂಘದಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜೂ.14- ವೀರಶೈವ ಲಿಂಗಾಯತ ನೌಕರರ ಪತ್ತಿನ ಸಹಕಾರ ಸಂಘದಿಂದ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಷೇರುದಾರ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಕುವೆಂಪು ಕನ್ನಡ ಭವನದಲ್ಲಿ ನಾಡಿದ್ದು ದಿನಾಂಕ 16ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಲೋಕಣ್ಣ ಮಾಗೋಡ್ರ ವಹಿಸುವರು. ಸುರೇಶ್ ಬಿ. ಇಟ್ನಾಳ್ ಉದ್ಘಾಟಿಸುವರು ಮತ್ತಿತರರು ಉಪಸ್ಥಿತರಿರುವರು.


**JOB OPPORTUNITIES**

| REQUIREMENT | NO. OF POSTS | QUALIFICATION |
|---|---|---|
| Nursing Staff | 10 | GNM/B.Sc (N) Fresher / Experienced |
| O.T Boys | 3 | SSLC Fresher / Experienced in Hospital as Ward Boy / OT Boy |

**VISHWAS LIFE CARE HOSPITAL**
#298, Vidyarthi Bhavan Circle, Hadadi Road, Davanagere.
**Contact No. 75800 75866**
Note : Candidates Should bring their brief CV, One Passport Size Photograph, Educational Certificates, Experienced Certificates. Attractive Salary will be Offered for most deserving candidates.

**VISHWARADHYA**
CANCER HOSPITAL & RESEARCH INSTITUTE
P.B.Road, Bada Cross, Davanagere.
We are Hiring Join our Team open Positions
- Duty Doctors
- Marketing (PRO)
- Insurance
- Counsellor
- Nurses

Qualification
- Have Experience in the Field
- Able to Speak English
- Great Communication Skill
- B.Com, MBA

Send your CV
vishwaradhyacancerhospital2019@gmail.com
94806 96842

# 'ಮಹಾರಾಜ್' ಚಿತ್ರಕ್ಕೆ ಹೈಕೋರ್ಟ್ ತಡೆ

ನವದೆಹಲಿ, ಜೂ. 14 - 'ಮಹಾರಾಜ್' ಚಿತ್ರದ ಬಿಡುಗಡೆಗೆ ಗುಜರಾತ್ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಈ ಹಿನ್ನೆಲೆಯಲ್ಲಿ ಶುಕ್ರವಾರ ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆಯಾಗಬೇಕಿದ್ದ ಚಿತ್ರವನ್ನು ಮುಂದೂಡಲಾಗಿದೆ. ವೈ.ಆರ್.ಎಫ್. ಎಂಟರ್‌ಟೈನ್‌ಮೆಂಟ್ ಈ ಚಿತ್ರವನ್ನು ನಿರ್ಮಿಸಿದೆ.

ಈ ಚಿತ್ರದಲ್ಲಿ ನಟ ಅಮೀರ್ ಖಾನ್ ಪುತ್ರ ಜುನೈದ್ ಖಾನ್ ನಟಿಸಿದ್ದಾರೆ. ಈ ಚಿತ್ರದ ವಿರುದ್ಧ ವೈಷ್ಣವ ಪುಷ್ಟಿಮಾರ್ಗ ಪಂಥದ ಸದಸ್ಯರೊಬ್ಬರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ಚಿತ್ರ ಬಿಡುಗಡೆಗೆ ತಡೆಯಾಜ್ಞೆ ಹೊರಡಿಸಿದ್ದ ನ್ಯಾಯಮೂರ್ತಿ ಸಂಗೀತ ವಿಶನೆನ್, ಕೇಂದ್ರ ಸರ್ಕಾರ, ನೆಟ್‌ಫ್ಲಿಕ್ಸ್ ಹಾಗೂ ಯಶ್ ರಾಜ್ ಫಿಲಂಸ್‌ಗೆ ನೋಟಿಸ್ ಕಳಿಸಿದ್ದಾರೆ. ವಿಚಾರಣೆಯನ್ನು ಜೂನ್ 18ಕ್ಕೆ ನಿಗದಿ ಪಡಿಸಲಾಗಿದೆ.

ಸಿದ್ಧಾರ್ಥ ಪಿ. ಮಲ್ಹೋತ್ರ ಅವರ ನಿರ್ದೇಶನದ ಈ ಚಿತ್ರದಲ್ಲಿ ಜೈದೀಪ್ ಅಹ್ಲಾವತ್ ಸಹ ನಟಿಸಿದ್ದಾರೆ. ಈ ಚಿತ್ರದ ಯಾವುದೇ ಟ್ರೈಲರ್ ಇಲ್ಲವೇ ಟೀಸರ್ ಬಿಡುಗಡೆ ಮಾಡಿರಲಿಲ್ಲ. ಜೈದೀಪ್ ಹಾಗೂ ಜುನೈದ್ ಇರುವ ಪೋಸ್ಟರ್ ಮಾತ್ರ ಬಿಡುಗಡೆ ಮಾಡಲಾಗಿತ್ತು.

ಈ ಚಿತ್ರವು 1862ರ ಮಾನಹಾನಿ ಪ್ರಕರಣವನ್ನು ಆಧರಿಸಿದೆ. ಈ ಚಿತ್ರವು ಸಮಾಜ ಸುಧಾರಕ ಹಾಗೂ ಪತ್ರಕರ್ತ ಕರ್ಸನ್ ಮುಲ್ಜಿ ಅವರಿಂದ ಪ್ರೇರಣೆ ಪಡೆದಿದೆ ಎಂದು ನೆಟ್‌ಫ್ಲಿಕ್ಸ್ ತಿಳಿಸಿತ್ತು.

ಈ ಚಿತ್ರವು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುತ್ತದೆ. ಇದರಿಂದ ಸಾರ್ವಜನಿಕ ಸುವ್ಯವಸ್ಥೆಯ ಮೇಲೆ ಪರಿಣಾಮವಾಗಲಿದೆ ಹಾಗೂ ವೈಷ್ಣವ ಪಂಥದ ವಿರುದ್ಧ ಹಿಂಸಾಚಾರಕ್ಕೆ ಪ್ರಚೋದನೆ ನೀಡಿದಂತಾಗುತ್ತದೆ ಎಂದು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು.

ಬ್ರಿಟಿಷರ ಕಾಲದ ನ್ಯಾಯಾಲಯದಲ್ಲಿ ಮಾನಹಾನಿ ಪ್ರಕರಣ ಇತ್ಯರ್ಥಪಡಿಸುವಾಗ ಹಿಂದೂ ಧರ್ಮವನ್ನು ತೇಜೋವಧೆ ಮಾಡಲಾಗಿತ್ತು ಹಾಗೂ ಕೃಷ್ಣ ದೇವರು ಮತ್ತು ಭಕ್ತಿ ಗೀತೆಗಳ ಗಂಭೀರ ನಿಂದನೆ ಮಾಡಲಾಗಿತ್ತು ಎಂದೂ ಅರ್ಜಿದಾರರು ಹೇಳಿದ್ದರು. 1862ರ ಪ್ರಕರಣವು ವೈಷ್ಣವ ಪಂಥದ ನಾಯಕ ಹಾಗೂ ಸಮಾಜ ಸುಧಾರಕ ಮುಲ್ಜಿ ನಡುವೆ ಸಂಘರ್ಷಕ್ಕೆ ಕಾರಣವಾಗಿತ್ತು.

ಕಳೆದ ಜೂನ್ 14ರ ಗುರುವಾರದಂದು ಸುಪ್ರೀಂ ಕೋರ್ಟ್ ಅನ್ನು ಕಪೂರ್ ಅವರ 'ಹಮಾರೆ ಬಾರಹ್' ಚಿತ್ರ ಬಿಡುಗಡೆ ಮಾಡದಂತೆ ತಡೆಯಾಜ್ಞೆ ಹೊರಡಿಸಿತ್ತು. ಈ ಚಿತ್ರ ಇಸ್ಲಾಂ ಧರ್ಮದ ಭಾವನೆಗಳಿಗೆ ಧಕ್ಕೆ ತರುವಂತಿದೆ ಎಂದು ಆರೋಪಿಸಲಾಗಿತ್ತು.

## ಆರ್ಸೆಸ್ಸೆಸ್-ಬಿಜೆಪಿ ನಡುವೆ ಒಡಕಿಲ್ಲ

ನವದೆಹಲಿ ಜೂ. 14 – ಲೋಕಸಭಾ ಚುನಾವಣೆಯ ನಂತರ ಬಿಜೆಪಿ ಹಾಗೂ ಆರ್.ಎಸ್.ಎಸ್. ಅಧ್ಯಕ್ಷ ಮೋಹನ್ ಭಾಗವತ್ ನಡುವೆ ಒಡಕಾಗಿದೆ ಎಂಬುದು ಕೇವಲ ಊಹಾಪೋಹ. ಗೊಂದಲ ಸೃಷ್ಟಿಸಲು ಈ ರೀತಿಯ ಊಹಾಪೋಹ ಹರಡಲಾಗುತ್ತಿದೆ ಎಂದು ಆರ್.ಎಸ್.ಎಸ್. ಹೇಳಿದೆ. ಆರ್.ಎಸ್.ಎಸ್. ಹಾಗೂ ಬಿಜೆಪಿ ನಡುವೆ ಯಾವುದೇ ಒಡಕಿಲ್ಲ ಎಂದು ಸಂಘಟನೆಯ ಮೂಲಗಳು ಹೇಳಿವೆ. ನಿಜವಾದ ಸೇವಕ ಎಂದೂ ಉದ್ಧಟನಾಗಿರುವುದಿಲ್ಲ ಎಂದು ಆರ್.ಎಸ್.ಎಸ್. ಮುಖ್ಯಸ್ಥ ಭಾಗವತ್ ಹೇಳಿದ್ದರು. ಇದು ಸಾಕಷ್ಟು ಚರ್ಚೆಗೆ ಕಾರಣವಾಗಿತ್ತು.

## ಹಿಂದೂ ಮಕ್ಕಳನ್ನು ಮದರಸಾಗಳಿಂದ ಸಾಮಾನ್ಯ ಶಾಲೆಗೆ ವರ್ಗಾಯಿಸಲು ಸೂಚನೆ

ಭೂಪಾಲ್, ಜೂ. 14 – ಮದರಸಾಗಳು ಶಿಕ್ಷಣ ಹಕ್ಕು ಕಾಯ್ದೆಯಡಿ ಬರುವುದಿಲ್ಲ. ಹೀಗಾಗಿ ಮಧ್ಯಪ್ರದೇಶದ ಮದರಸಾಗಳಲ್ಲಿ ಅಧ್ಯಯನ ಮಾಡುತ್ತಿರುವ ಹಿಂದೂ ಮಕ್ಕಳನ್ನು ಸಾಮಾನ್ಯ ಶಾಲೆಗೆ ವರ್ಗಾಯಿಸಬೇಕು ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಪ್ರಿಯಾಂಕ್ ಕಣುಂಗೊ ರಾಜ್ಯ ಸರ್ಕಾರಕ್ಕೆ ತಿಳಿಸಿದ್ದಾರೆ.

1,755 ನೋಂದಾಯಿತ ಮದರಸಾಗಳಲ್ಲಿ 9,417 ಹಿಂದೂ ಮಕ್ಕಳು ಅಧ್ಯಯನ ಮಾಡುತ್ತಿದ್ದಾರೆ. ಈ ಮದರಸಾಗಳು ಆರ್.ಟಿ.ಇ. ಕಾಯ್ದೆಗೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಹೊಂದಿಲ್ಲ ಎಂದವರು ಹೇಳಿದ್ದಾರೆ. ನೋಂದಾಯಿಸದ ಮದರಸಾಗಳಲ್ಲಿ ಅಧ್ಯಯನ ಮಾಡುತ್ತಿರುವ ಮುಸ್ಲಿಂ ಮಕ್ಕಳನ್ನೂ ಸಾಮಾನ್ಯ ಶಾಲೆಗೆ ವರ್ಗಾಯಿಸಬೇಕೆಂದು ಅವರು ತಿಳಿಸಿದ್ದಾರೆ.

## ಹೆಚ್. ದಾದಾಪೀರ್ ತರಬೇತುದಾರರಾಗಿ ಆಯ್ಕೆ



ದಾವಣಗೆರೆ, ಜೂ. 14 - ಏಕಲವ್ಯ ಪ್ರಶಸ್ತಿ, ಪೊಲೀಸ್ ರಾಷ್ಟ್ರಪತಿ ಪದಕ ವಿಜೇತ ಮತ್ತು ಅಂತರರಾಷ್ಟ್ರೀಯ ಪವರ್ ಲಿಫ್ಟಿಂಗ್ ತೀರ್ಪುಗಾರ ಹೆಚ್. ದಾದಾಪೀರ್ ಅವರು ರಾಷ್ಟ್ರಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆ ರಾಜ್ಯ ತಂಡಕ್ಕೆ ತರಬೇತುದಾರರಾಗಿ ಆಯ್ಕೆಯಾಗಿದ್ದಾರೆ.

ನಾಡಿದ್ದು ದಿನಾಂಕ 16 ರಿಂದ 21 ರವರೆಗೆ ಪಂಜಾಬ್ ರಾಜ್ಯದ ಪಾಟಿಯಾಲದಲ್ಲಿ ನಡೆಯಲಿರುವ 24-25ರ ರಾಷ್ಟ್ರಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಗೆ ಹೆಚ್. ದಾದಾಪೀರ್ ರಾಜ್ಯ ತಂಡಕ್ಕೆ ತರಬೇತುದಾರರಾಗಿ ಆಯ್ಕೆಯಾಗಿದ್ದಾರೆ.

## ಸಿಸಿ ಐಕಾನ್ - 2024ರಲ್ಲಿ ಡಾ. ಎನ್.ಹೆಚ್. ಕೃಷ್ಣ



ದಾವಣಗೆರೆ, ಜೂ. 14 - ಶ್ರೀನಗರದ ಶೇರೇ ಕಾಶ್ಮೀರ ಕೃಷಿ ವಿಶ್ವವಿದ್ಯಾಲಯದ ವಿಶಾಲ ಸಭಾಂಗಣದಲ್ಲಿ ನಡೆದ ಚೆಸ್ಟ್ ಕೌನ್ಸಿಲ್ ಆಫ್ ಇಂಡಿಯಾ (ಸಿ.ಸಿ.ಐ.)ದ 5ನೇ ರಾಷ್ಟ್ರೀಯ ಶ್ವಾಸಕೋಶ ಕಾಯಿಲೆಗಳ ಕಾನ್ಫರೆನ್ಸ್ 'ಸಿಸಿಐಕಾನ್ -2024' ರಲ್ಲಿ ಸಿ.ಸಿ.ಐ. ಸಂಸ್ಥಾಪಕ ಅಧ್ಯಕ್ಷ ಡಾ. ಎನ್.ಹೆಚ್. ಕೃಷ್ಣ ಅವರನ್ನು ಸಂಘಟನಾ ಕಾರ್ಯದರ್ಶಿ ಡಾ.ನವೀದ್ ನಾಸಿರ್ ಷಾ ಅವರು ಸನ್ಮಾನಿಸಿ, ಗೌರವಿಸಿದರು.

## ಅಂತರ್ಜಾತಿ ವಿವಾಹಕ್ಕೆ ಬೆಂಬಲ : ಸಿಪಿಐ ಕಚೇರಿ ಧ್ವಂಸ

ತಿರುನಲ್ವೇಲಿ, ಜೂ. 14 – ಅಂತರ್ಜಾತಿ ಮದುವೆಯನ್ನು ಬೆಂಬಲಿಸಿದ್ದನ್ನು ವಿರೋಧಿಸಿ ಸಿಪಿಐ (ಎಂ) ಕಚೇರಿಯನ್ನು ಧ್ವಂಸಗೊಳಿಸಿದ ಘಟನೆ ತಮಿಳುನಾಡಿನಲ್ಲಿ ನಡೆದಿದೆ. ಅಂತರ್ಜಾತಿ ಜೋಡಿ ಪಕ್ಷದ ಕಚೇರಿಯಲ್ಲಿ ಗುರುವಾರ ಮದುವೆ ಮಾಡಿಕೊಂಡಿತ್ತು. ನಂತರ ಹೆಣ್ಣಿನ ಕಡೆಯವರು ಹಾಗೂ ಜಾತಿ ಸಂಘಟನೆಯವರು ಸಿಪಿಐ (ಎಂ) ಕಚೇರಿಯ ಮೇಲೆ ದಾಳಿ ನಡೆಸಿದ್ದಾರೆ. ಸಿಪಿಐ (ಎಂ)ನ ಇಬ್ಬರು ಕಾರ್ಯಕರ್ತರ ಮೇಲೂ ಹಲ್ಲೆ ನಡೆಸಲಾಗಿದೆ.

**STAFF REQUIRED**

**Optometrist (2):** Diploma in optometry / BSc.Optometry with at least 2 years experience in retail outlets with good clinical skills. Freshers may also apply, training will be provided.

**Optical Fitter (1):** Optical fitting with minimum 2 years of experience in Spectacle fittings and service.

**Attractive salary, Sales incentive and bonus will be provided.**

If you have excellent communication skills, a pleasing personality and a ambition to grow, mail your resume with photographs to **admin@lensight.in / Whatsapp on Mob: 95661 97826**

For Your Eyes Only
LENSIGHT
The Multibrand Opticals

ಡಾ।। ಮೋದಿ ರಸ್ತೆ, ಪಿ ಜೆ ಬಡಾವಣೆ,
ಬಾಪೂಜಿ ಕಣ್ಣಿನ ಆಸ್ಪತ್ರೆ ಎದುರು, ದಾವಣಗೆರೆ
MOB: 95661 97826







KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas